ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYA PRAGATHI Kannada daily
ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 Issue:104
ಸಂಪುಟ: 05 ಸಂಚಿಕೆ: 104
Date:08-05-2026 Friday
RNI NO : KARKAN/2021/80805 L2/RNP-1285/TMR/2025-27
Page :4 Price: 1.00
ಪುಟ : 4 ಬೆಲೆ: 1.00 ರೂ

ಸಣ್ ಸುದ್ದಿ

## ಡಿಎಲ್‌ಸಿಯು ಕಾಂಕ್ರಿಟ್ ರಸ್ತೆ ಕಾಮಗಾರಿ : ವಾಹನ ಸಂಚಾರ ನಿರ್ಬಂಧಿಸಿ ಡಿ.ಸಿ. ಆದೇಶ

ತುಮಕೂರು: ತಿಪಟೂರು ತಾಲ್ಲೂಕು ತಿಪಟೂರು–ಹಾಸನ ರಸ್ತೆಯಲ್ಲಿ ಕೆ.ಎಂ.ಇ.ಆರ್.ಸಿ. ಅನುದಾನದಲ್ಲಿ ತಿಪಟೂರು ಟೌನ್, ಹಾಸನ ಸರ್ಕಲ್‌ನಿಂದ ಗಂಡಸಿ ಹ್ಯಾಂಡ್ ಪೋಸ್ಟ್‌ವರೆಗೆ ಡಿಎಲ್‌ಸಿಯು ಕಾಂಕ್ರಿಟ್ ರಸ್ತೆ ಕಾಮಗಾರಿ ಕೈಗೊಂಡಿರುವುದರಿಂದ ಅಧಿಕ ಭಾರದ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಬದಲಿ ರಸ್ತೆಯಾದ ತಿಪಟೂರು ಹಾಸನ ಸರ್ಕಲ್‌ನಿಂದ ಅರಸೀಕೆರೆ ಮಾರ್ಗವಾಗಿ ಗಂಡಸಿ ಹ್ಯಾಂಡ್ ಪೋಸ್ಟ್‌ವರೆಗೆ ಸಂಚರಿಸಲು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಆದೇಶಿಸಿದ್ದಾರೆ.

ಈ ಆದೇಶವು 2026ರ ಜೂನ್ 15ರವರೆಗೆ ಜಾರಿಯಲ್ಲಿರುತ್ತದೆ. ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಸೂಚಿಸಲಾಗಿದ್ದು, ತಪ್ಪಿದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ರೀತ್ಯಾ ಅಗತ್ಯಕ್ರಮವಹಿಸಲು ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ.

## ಅಕ್ಷತಗೆ ಪಿಹೆಚ್.ಡಿ ಪದವಿ



ಅಕ್ಷತ ಕೆ., ರವರು ತುಮಕೂರು ವಿಶ್ವ ವಿದ್ಯಾನಿಲಯದಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಡಾ.ಗೀತಾ ವಸಂತ ಇವರ ಮಾರ್ಗದರ್ಶನದಲ್ಲಿ ಮಂಡಿಸಿದ "ಕನ್ನಡದ ಪ್ರಾತಿನಿಧಿಕ ಮಹಿಳಾ ಆತ್ಮಕಥನಗಳಲ್ಲಿ ಹೆಣ್ತನದ ಮರು ರಚನೆ" ವಿಷಯದ ಕುರಿತ ಮಹಾಪ್ರಬಂಧಕ್ಕೆ ತುಮಕೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಯನ್ನು ನೀಡಿರುತ್ತದೆ.

## ಅಪೂರ್ಣ ಗೊಂಡ ಯುಜಿಡಿ ಕಾಮಗಾರಿ ತೆರಿಗೆ ವಸೂಲಿಗೆ ಬಂದರು ಪುರಸಭಾ ಅಧಿಕಾರಿಗಳು



ಮಧುಗಿರಿ: ಅಪೂರ್ಣ ಗೊಂಡಿರುವ ಯುಜಿಡಿ ಕಾಮಗಾರಿ ಆರಂಭಗೊಳ್ಳುವುದಕ್ಕೂ ಮೊದಲೇ ಪುರಸಭೆಯವರು ತೆರಿಗೆ ವಸೂಲಿ ಮಾಡುತ್ತಿರುವುದಕ್ಕೆ ಸಾರ್ವಜನಿಕರಿಂದ ಆರೋಪ ಕೇಳಿ ಬಂದಿದೆ. ಪಟ್ಟಣದಲ್ಲಿ ಯುಜಿಡಿ ಕಾಮಗಾರಿಯನ್ನು ಕೆಲ ಭಾಗಗಳಲ್ಲಿ ಪೂರ್ಣಗೊಳಿಸಿಲ್ಲಾ.ಆದರೆ ಪಟ್ಟಣದ ಕೆಲ ವಾರ್ಡ್ ಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದರು ಸಹ ಯುಜಿಡಿ ಸಂಪರ್ಕವನ್ನು ನೀಡಲು ಸಿಬ್ಬಂದಿಗಳು ಮುಂದಾಗಿಲ್ಲಾ ಆದರೂ ಸಹ ಕೆಲ ಕಡೆ ಸಿಬ್ಬಂದಿಗಳ ಈ ವರ್ತನೆಯಿಂದಾಗಿ ಸಾರ್ವಜನಿಕರು ರೋಸಿ ಹೋಗಿ ಅವರೆ ಯುಜಿಡಿ ಸಂಪರ್ಕವನ್ನು ಕಲ್ಪಿಸಿಕೊಂಡಿದ್ದಾರೆ.

ಪಟ್ಟಣದ ವಿದ್ಯಾನಗರದ ನಾಲ್ಕನೇ ಕ್ರಾಸ್ ನಲ್ಲಿ ದೊಡ್ಡ ಬಂಡೆಯೊಂದು ಇದ್ದೂ ಅದನ್ನು ಹೊಡೆದು ಸಂಪರ್ಕ ನೀಡುತ್ತೇವೆಂದು ಹೇಳಿ ವರ್ಷಗಳೆ ಕಳೆದರೂ ಸಹ ಬಂಡೆಯನ್ನು ತೆರವು ಗೊಳಿಸಿಲ್ಲಾ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲಾ ಆದರೆ ಆ ಭಾಗದಲ್ಲಿರುವ ಮನೆಗಳ ತೆರಿಗೆಯ ಜತೆಯಲ್ಲಿ ಯುಜಿಡಿ ಸಂಪರ್ಕಕ್ಕೆಂದು ತೆರಿಗೆ ವಸೂಲಿ ಮಾಡುತ್ತಿರುವುದು ಸಾರ್ವಜನಿಕರಲ್ಲಿ ಬೇಸರ ಮೂಡಿಸಿದೆ. ಇನ್ನೂ ಯುಜಿಡಿ ಕಾಮಗಾರಿಗೆ ಸಂಬಂಧಿಸಿದ ಸಿಬ್ಬಂದಿಗಳು ಪಟ್ಟಣದ ಕೆಲ ಭಾಗಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದೆ ಇದ್ದರೂ ಶೇ.90ರಷ್ಟು ಪೂರ್ಣ ಗೊಳಿಸಲಾಗಿದೆ ಎಂದು ತಮ್ಮ ಮೇಲಾಧಿಕಾರಿಗಳಿಗೆ ತಪ್ಪು ಮಾಹಿತಿಯನ್ನು ನೀಡುತ್ತಾ ಕಾಲ ಹರಣ ಮಾಡುತ್ತಿದ್ದಾರೆ.ಸಾರ್ವಜನಿಕರು ಹಲವಾರು ಈ ಸಿಬ್ಬಂದಿಗಳಿಗೆ ಮೌಖಿಕವಾಗಿ ಹಾಗೂ ದೂರವಾಣಿಗಳ ಮುಖಾಂತರ ಸಮಸ್ಯೆಯ ಬಗ್ಗೆ ತಿಳಿ ಹೇಳಿದರೂ ಕಾಮಗಾರಿಯನ್ನು ಪೂರ್ಣಗೊಳಿಸುತ್ತಿಲ್ಲಾ.ಹಾಗೂ ಪುರಸಭೆಯಲ್ಲಿ ನಡೆದ ಸಭೆಗಳಲ್ಲಿ ಯುಜಿಡಿ ಸಂಪರ್ಕಕ್ಕೆ ಪ್ರತ್ಯೇಕವಾಗಿ ಕೆಲ ವಾರ್ಡ್ ಗಳಲ್ಲಿ ಹಾಗೂ ಎಸ್.ಸಿ,ಎಸ್ .ಟಿ ಸಮುದಾಯದವರು ವಾಸವಿರುವ ಹಾಗೂ ಇತರೆ ಸಮುದಾಯಗಳ ಮನೆಗಳಿಗೆ ಪ್ರತ್ಯೇಕ ದರ ನಿಗಧಿಪಡಿಸಿರುವ ಬಗ್ಗೆ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟವರು ನೀಡುತ್ತಿಲ್ಲಾ ಎಂದು ಆರೋಪಿಸಿದ್ದಾರೆ.

## ಮೇ 15ರಂದು ಜಿಲ್ಲಾ ಮಟ್ಟದ ದಿಶಾ ಸಮಿತಿ

ತುಮಕೂರು: ರೈಲ್ವೇ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವರು ಹಾಗೂ ಸಂಸದರಾದ ವಿ. ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ಮೇ 15ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ 'ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ' ಏರ್ಪಡಿಸಲಾಗಿದೆ.

ಸಭೆಯಲ್ಲಿ 2025–26ನೇ ಸಾಲಿನ ಎಪ್ರಿಲ್–2025 ರಿಂದ ಮಾರ್ಚ್–2026ರ ಅಂತ್ಯದವರೆಗೆ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ ತಿಳಿಸಿದ್ದಾರೆ.

# ಬಂಗಾಳದ ರಾಜ್ಯಪಾಲರಿಂದ ವಿಧಾನಸಭೆ ವಿಸರ್ಜನೆ

## ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲು ನಕಾರ





ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ ನಂತರ ಪಶ್ಚಿಮ ಬಂಗಾಳದ ರಾಜ್ಯಪಾಲರು ವಿಧಾನಸಭೆಯನ್ನು ವಿಸರ್ಜಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಬಹುಮತ ಕಳೆದುಕೊಂಡು ಅಧಿಕಾರಾವಧಿ ಮುಗಿದರೂ ರಾಜೀನಾಮೆ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದ್ದ ಮಮತಾ ಬ್ಯಾನರ್ಜಿಗೆ ಕಾನೂನಿನ ಮೂಲಕವೇ ರಾಜ್ಯಪಾಲರು ಉತ್ತರ ನೀಡಿದ್ದಾರೆ. ಹೀಗಾಗಿ, ದೀದಿ ಸರ್ಕಾರ ಅಧಿಕೃತವಾಗಿ ಪತನವಾಗಿದ್ದು, 15 ವರ್ಷಗಳ ಕಾಲ ರಾಜ್ಯವನ್ನು ಆಳಿದ ಮಮತಾ ಬ್ಯಾನರ್ಜಿ ಈಗ ಮಾಜಿ ಮುಖ್ಯಮಂತ್ರಿಯಾಗಿದ್ದಾರೆ.

ಕೊಲ್ಕತ್ತಾ, ಮೇ 7: ಪಶ್ಚಿಮ ಬಂಗಾಳದ (ಘಭಿಣ ៖ಜಟಿರಿಂಚಿಟ) ರಾಜ್ಯಪಾಲ ಆರ್.ಎನ್. ರವಿ ಇಂದು ಪಶ್ಚಿಮ ಬಂಗಾಳದ ವಿಧಾನಸಭೆಯನ್ನು ವಿಸರ್ಜಿಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತ ಗಳಿಸಿದೆ. ಆದರೂ ಬಿಜೆಪಿ ಮತ ಕಳ್ಳತನ ಮಾಡಿದೆ ಎಂದು ಆರೋಪ ಹೊರಿಸಿ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ್ದರು. ಈಗಾಗಲೇ ಮಮತಾ ಬ್ಯಾನರ್ಜಿ ಅವರ ಅಧಿಕಾರಾವಧಿ ಮುಗಿದಿರುವುದರಿಂದ ಕಾನೂನು ಸಲಹೆ ಪಡೆದ ಪಶ್ಚಿಮ ಬಂಗಾಳದ ರಾಜ್ಯಪಾಲ ಆರ್. ಎನ್. ರವಿ ಬಂಗಾಳದ ಸಂಪುಟವನ್ನು ವಿಸರ್ಜಿಸುವ ನಿರ್ಧಾರ ತೆಗೆದುಕೊಂಡಿದ್ದಾರೆ. ಹೀಗಾಗಿ, ಬಿಜೆಪಿ ಸರ್ಕಾರ ರಚನೆಯಾಗಲು ಅವಕಾಶ ಸಿಕ್ಕಂತಾಗಿದೆ. ಮೇ 9ರಂದು ಬಂಗಾಳದಲ್ಲಿ ಬಿಜೆಪಿಯ ಮೊದಲ ಸರ್ಕಾರ ರಚನೆಯಾಗಲಿದೆ ಎನ್ನಲಾಗುತ್ತಿದೆ. ಆದರೆ, ಇನ್ನೂ ಬಿಜೆಪಿ ಸರ್ಕಾರ ರಚನೆಗೆ ರಾಜ್ಯಪಾಲರಿಗೆ ಹಕ್ಕು ಮಂಡನೆ ಮಾಡಿಲ್ಲ. ಭಾರತದ ಸಂವಿಧಾನದ 174ನೇ ವಿಧಿಯ ಷರತ್ತು (2)ರ ಉಪ–ಷರತ್ತು (ಬಿ) ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಬಳಸಿಕೊಂಡು ಬಂಗಾಳದ ರಾಜ್ಯಪಾಲರು ಪಶ್ಚಿಮ ಬಂಗಾಳ ವಿಧಾನಸಭೆಯನ್ನು ವಿಸರ್ಜಿಸಲು ಆದೇಶಿಸಿದ್ದಾರೆ. ಈ ಘೋಷಣೆಯನ್ನು ಬುಧವಾರ, ಮೇ 6, 2026 ರಂದು ಪ್ರಕಟವಾದ ವಿಶೇಷ ಗೆಜೆಟ್ ಅಧಿಸೂಚನೆಯಲ್ಲಿ (ಅಧಿಸೂಚನೆ ಸಂಖ್ಯೆ: 275–ಕಂ/1ಐ–03/2026) ಮಾಡಲಾಗಿದೆ. ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಹೊರಡಿಸಿದ ಈ ನಿರ್ದೇಶನದ ಪ್ರಕಾರ, ಪ್ರಸ್ತುತ ವಿಧಾನಸಭೆಯನ್ನು ಮೇ 7ರಿಂದ ಜಾರಿಗೆ ಬರುವಂತೆ ಔಪಚಾರಿಕವಾಗಿ ವಿಸರ್ಜಿಸಲಾಗಿದೆ.

ರಾಜ್ಯಪಾಲ ಆರ್.ಎನ್.ರವಿ ಅವರು ಸಹಿ ಮಾಡಿದ ಈ ಆದೇಶವನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ರಾಜ್ಯದ ಮುಖ್ಯ ಕಾರ್ಯದರ್ಶಿ ದುಶ್ಯಂತ ನರಿಯಾಲ (ಐಎಎಸ್) ಪ್ರಕಟಿಸಿದ್ದಾರೆ. ಹೊಸ ಸರ್ಕಾರ ಅಧಿಕಾರ ವಹಿಸಿಕೊಳ್ಳುವ ಮೊದಲು ಚುನಾವಣೆಯ ನಂತರ ಹಳೆಯ ವಿಧಾನಸಭೆಯನ್ನು ವಿಸರ್ಜಿಸುವುದು ಸಾಮಾನ್ಯವಾಗಿ ಸಾಂವಿಧಾನಿಕ ಪದ್ಧತಿಯಾಗಿದೆ. ಈ ಆದೇಶವು 17 ನೇ ವಿಧಾನಸಭೆಯ ಅವಧಿಯನ್ನು ಕೊನೆಗೊಳಿಸಲಿದ್ದು, ಹೊಸದಾಗಿ ಆಯ್ಕೆಯಾದ ಪ್ರತಿನಿಧಿಗಳೊಂದಿಗೆ 18ನೇ ವಿಧಾನಸಭೆಯ ರಚನೆಗೆ ದಾರಿ ಮಾಡಿಕೊಡುತ್ತದೆ.

# ತಮಿಳುನಾಡು ಚುನಾವಣೆಯಲ್ಲಿ ಗೆದ್ದು ಮಿಂಚಿದ ಕನ್ನಡಿಗ

## ನಾನು ಹೆಮ್ಮೆಯ ಕನ್ನಡಿಗ–ನಮ್ಮೂರ ದೇವರ ಆಶೀರ್ವಾದದಿಂದ ಗೆದ್ದೆ



ಬೆಂಗಳೂರು: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ದಳಪತಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (TVK) ಪಕ್ಷ ಸಂಚಲನ ಮೂಡಿಸಿದೆ. ವಿಜಯ್ ಅವರ ಪಕ್ಷದಲ್ಲಿ ಕನ್ನಡಿಗ ಕೂಡ ವಿಜಯ ಪತಾಕೆ ಹಾರಿಸಿದ್ದಾರೆ.

ತಮಿಳುನಾಡಿನ ಮೆಟ್ಟುಪಾಳ್ಯಂ ವಿಧಾನಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿರುವ ಸುನೀಲ್ ಆನಂದ್ ಅವರು ಮೂಲತಃ ಕರ್ನಾಟಕದ ತುಮಕೂರು ಜಿಲ್ಲೆಯವರಾಗಿದ್ದು, ಸುನೀಲ್ ಗೆಲುವನ್ನು ಗ್ರಾಮಸ್ಥರು ಸಂಭ್ರಮಿಸಿದ್ದಾರೆ.

ಸುನೀಲ್ ಅವರು ಮೊದಲು ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷದಲ್ಲಿದ್ದರು. ಆದರೆ, ವಿಜಯ್ ಪರಿಣಾಮಕಾರಿ ಚಟುವಟಿಕೆಗಳು, ಅವರ ವೇಗವನ್ನು ಗ್ರಹಿಸಿ, ಎರಡು ವರ್ಷಗಳ ಹಿಂದೆ ಟಿವಿಕೆ ಪಕ್ಷಕ್ಕೆ ಸೇರಿದ್ದರು.

ಈ ಬಾರಿಯ ಚುನಾವಣೆಯಲ್ಲಿ ಸುನೀಲ್ ಅವರು 75,664 ಮತಗಳನ್ನು ಪಡೆದು 7,768 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಅವರ ಎದುರಾಳಿಯಾದ ಕವಿತಾ ಕಲ್ಯಾಣಸುಂದರಂ 67,896 ಮತಗಳನ್ನು ಪಡೆದಿದ್ದಾರೆ. ಈ ಬಾರಿ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಏಕೈಕ ಕನ್ನಡಿಗ ಎಂಬ ಹೆಗ್ಗಳಿಕೆಗೆ ಸುನಿಲ್ ಪಾತ್ರರಾಗಿದ್ದಾರೆ. ಕೃಷಿಕ ಮತ್ತು ಉದ್ಯಮಿಯಾಗಿರುವ ಸುನಿಲ್ ಅವರು, ಮೂಲತಃ ತುರುವೇಕೆರೆ ತಾಲ್ಲೂಕಿನ ವಡಕೆಘಟ್ಟ ಗ್ರಾಮದ ಮೂಲದವರಾಗಿದ್ದು, ಅದೇ ಗ್ರಾಮದ ಅವರ ಚಿಕ್ಕಪ್ಪ ಎಚ್.ಬಿ. ನಂಜೇಗೌಡ (ಮೂರ್ತಿ) ಜನತಾದಳದ ಮಾಜಿ ಶಾಸಕರಾಗಿದ್ದರು (1994). ಸುನಿಲ್ ಅವರ ತಾತ ಎಚ್.ಎಲ್. ಲಿಂಗೇಗೌಡ ಅವರು ಮೆಟ್ಟುಪಾಳಯಂನಲ್ಲಿ ಪುರಸಭೆ ಅಧ್ಯಕ್ಷರಾಗಿದ್ದರು. ತಂದೆ ನಾಗರಾಜು ಉದ್ಯಮಿಯಾಗಿದ್ದು, ಕೋವಿಡ್ ಸಂದರ್ಭದಲ್ಲಿ ನಿಧನರಾಗಿದ್ದರು. ಮೈಸೂರಿನಲ್ಲೂ ಅವರ ಕುಟುಂಬಕ್ಕೆ ವ್ಯಾಪಾರ ಸಂಬಂಧಗಳಿವೆ. ಸುನಿಲ್ ಕುಟುಂಬ ಕಾರ್ಯಕ್ರಮಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಇಲ್ಲಿಗೆ ಬರುತ್ತಲೇ ಇರುತ್ತಾರೆ. ಅವರು ಉತ್ತಮ ಸಂಘಟಕ ಮತ್ತು ಜನಪರ ವ್ಯಕ್ತಿ ಎಂದು ಚಿಕ್ಕಪ್ಪ ನಂಜೇಗೌಡ ಅವರು ತಿಳಿಸಿದ್ದಾರೆ.

ಟಿವಿಕೆ ಪಕ್ಷದಲ್ಲಿ ಉತ್ತಮ ಸಂಘಟಕರಾಗಿ ಗುರುತಿಸಿಕೊಂಡಿರುವ ಸುನೀಲ್, ಜನಪರ ವ್ಯಕ್ತಿತ್ವದಿಂದಲೇ ಮೆಟ್ಟುಪಾಳಯಂ ಕ್ಷೇತ್ರದಲ್ಲಿ ಜನರ ವಿಶ್ವಾಸ ಗಳಿಸಿದ್ದಾರೆ ಎಂದು ಅವರ ಬಂಧುಗಳು ಹೇಳಿದ್ದಾರೆ. ಚುನಾವಣಾ ಗೆಲುವಿನ ಬಳಿಕ ಪ್ರತಿಕ್ರಿಯಿಸಿದ ಸುನಿಲ್, "ನಾನು ಹೆಮ್ಮೆಯ ಕನ್ನಡಿಗ. ವರ್ಷಕ್ಕೆ ನಾಲ್ಕೈದು ಬಾರಿ ನಮ್ಮ ಊರಿಗೆ ಬಂದು ಕುಟುಂಬದ ದೇವತೆ ಮಾಯಮ್ಮ ಮತ್ತು ಆದಿಚುಂಚನಗಿರಿ ಕಾಲಭೈರವೇಶ್ವರ ದೇವರ ದರ್ಶನ ಪಡೆಯುತ್ತೇನೆ" ಎಂದು ಹೇಳಿದ್ದಾರೆ.

# ರವೀಂದ್ರನಾಥ ಠಾಗೂರ್,ಶಾಹು ಮಹರಾಜ್ ರವರ ಪುಣ್ಯಸ್ಮರಣೆ ಕಾರ್ಯಕ್ರಮ



ತುಮಕೂರು : ನಗರದ ಅಮಾನಿಕೆರೆ ಪಾರ್ಕ್ ಆವರಣದಲ್ಲಿ ಸ್ವಾತಂತ್ರ್ಯ ಭಾರತದ ರಾಷ್ಟ್ರಗೀತೆಯ ಜನಕ ರವೀಂದ್ರನಾಥ ಠಾಗೂರ್ ರವರ ಜನ್ಮದಿನಾಚರಣೆ ಹಾಗೂ ಸಮಾನತೆಯ ಬುನಾದಿ ಹಾಕಿಕೊಟ್ಟಂತಹ ಶಾಹು ಮಹರಾಜ್ ರವರ ಪುಣ್ಯಸ್ಮರಣೆ ಕಾರ್ಯಕ್ರಮಗಳನ್ನು ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಹಾಗೂ ಅಖಿಲ ಭಾರತ ಡಾ. ಅಂಬೇಡ್ಕರ್ ಪ್ರಚಾರ ಸಮಿತಿಯ ವತಿಯಿಂದ ಇಂದು ಆಚರಿಸಲಾಯಿತು.

ಇಬ್ಬರು ಮಹಾನಾಯಕರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿ ಜಿಲ್ಲಾಧ್ಯಕ್ಷರಾದ ಎನ್.ಕೆ. ನಿಧಿಕುಮಾರ್ ಮಾತನಾಡುತ್ತಾ ನಮ್ಮ ಭಾರತ ದೇಶದ ಸಂಸ್ಕೃತಿ, ಕಲೆ, ಸಾಹಿತ್ಯ, ನದಿಗಳು, ಧರ್ಮಗಳನ್ನು ಒಗ್ಗೂಡಿಸಿ ನಾವೆಲ್ಲರೂ ಒಂದೇ ಭಾರತದ ಪ್ರಜೆಗಳು ಎಂಬ ಸಂದೇಶವನ್ನು ತೋರುವ ಗೀತೆಯನ್ನು ರಚಿಸಿದಂತಹ ಮಹಾನ್ ನಾಯಕ ರವೀಂದ್ರನಾಥ ಠಾಗೂರ್ ರವರು ಅವರ ಜನ್ಮದಿನಾಚರಣೆಯನ್ನು ನಾವು ಇಂದು ಆಚರಿಸುತ್ತಿದ್ದೇವೆ, ಇಂದು ಅವರು ನಮ್ಮೊಟ್ಟಿಗೆ ಇಲ್ಲ ಆದರೆ ಅವರು ರಚಿಸಿರುವ ರಾಷ್ಟ್ರಗೀತೆಗೆ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಸಹ ಎದ್ದುನಿಂತು ಗೌರವ ಸೂಚಿಸುವಂತಹ ಕಾರ್ಯವನ್ನು ಮಾಡಿರುವ ಮೇರು ನಾಯಕನೆಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿಗಳಾದ ಎನ್.ರವಿಕುಮಾರ್ ಮಾತನಾಡುತ್ತಾ ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಸಮಾನತೆಯ ಬುನಾದಿ ಹಾಕಿ, ಸಾಮಾಜಿಕ ನ್ಯಾಯದ ಧ್ವಜವನ್ನು ಎತ್ತಿದ ರಾಜರ್ಷಿ ಶಾಹೂ ಮಹಾರಾಜರು ಕೇವಲ ಒಬ್ಬ ಆಡಳಿತಗಾರರಲ್ಲ; ಅವರು ಪರಿವರ್ತನೆಯ ಧ್ಯೇಯವಂತ ಯೋಧರಾಗಿದ್ದರು. ಕೊಲ್ಹಾಪುರ ಸಂಸ್ಥಾನದಲ್ಲಿ ಅವರು ಮೊದಲ ಬಾರಿಗೆ ಮೀಸಲಾತಿಯನ್ನು ಜಾರಿಗೆ ತಂದು, ಬಹುಜನ ಸಮಾಜಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರತಿನಿಧಿತ್ವದ ಹಕ್ಕನ್ನು ನೀಡಿದರು. ಆ ಕಾಲದಲ್ಲೇ ಇದು ಕ್ರಾಂತಿಕಾರಿ ಸಾಮಾಜಿಕ ಸುಧಾರಣೆ ಮಾಡಿದಂತಹ ವ್ಯಕ್ತಿಗಳಾಗಿದ್ದರು ಎಂದು ಶಾಹು ಮಹರಾಜ್ ರವರ ಬಗ್ಗೆ ವಿಚಾರ ಧಾರೆಯನ್ನು ತಿಳಿಸಿದರು.

ತುಮಕೂರು ಜಿಲ್ಲಾ ಅಟ್ರಾಸಿಟಿ ಕಮಿಟಿ ಸದಸ್ಯರಾದ ಗೋವಿಂದರಾಜು ಕೆ ಮಾತನಾಡುತ್ತಾ ಶಾಹು ಮಹರಾಜ್ ರವರ ಸ್ಮೃತಿದಿನದ ಅಂಗವಾಗಿ, ಸಮಾನತೆ, ಭ್ರಾತೃತ್ವ ಮತ್ತು ಪ್ರಬೋಧನೆಯ ಅವರ ಚಿಂತನೆಗಳನ್ನು ಮುಂದುವರಿಸುವ ಸಂಕಲ್ಪ ಮಾಡೋಣ. ಅನ್ಯಾಯ, ಅಸಮಾನತೆ ಮತ್ತು ಭೇದಭಾವಗಳ ವಿರುದ್ಧ ಹೋರಾಡುವ ಪ್ರೇರಣೆ ಅವರಿಂದ ಸದಾಕಾಲ ದೊರೆಯುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಹಾಗೂ ಅಖಿಲ ಭಾರತ ಡಾ ಅಂಬೇಡ್ಕರ್ ಪ್ರಚಾರ ಸಮಿತಿಯ ಜಿಲ್ಲಾಧ್ಯಕ್ಷರಾದ ಎನ್. ಕೆ. ನಿಧಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಎನ್. ರವಿಕುಮಾರ್, ಜಿಲ್ಲಾ ಉಪಾಧ್ಯಕ್ಷರಾದ ಲಕ್ಷ್ಮೀನಾರಾಯಣ ಎಸ್, ಮುಖಂಡರುಗಳಾದ ಇಲಾಸ್ ಅಹಮ್ಮದ್, ರಂಗಸ್ವಾಮಯಕ್ಕೆ ಕೆ.ಎಸ್, ಗಂಗಾಧರ್ ಜಿ.ಆರ್, ಮೋಯಿನ್ ಅಹಮ್ಮದ್, ಹನುಮನರಸಯ್ಯ, ಮಾರ್ಕೆಟ್ ಮಣ್ಣಪ್ಪ, ತ್ಯಾಗರಾಜು, ಶಿವರಾಜ್, ಕಿರಣ್ ವೈ. ಎಸ್, ದಿಬ್ಬೂರು ಶ್ರೀನಿವಾಸ್, ನರಸಿಂಹಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕಟ್ಟೆಗೊಲ್ಲಹಳ್ಳಿ: 1.8 ಕೋಟಿ ಕಾಮಗಾರಿಗೆ ಚಾಲನೆ



ತುಮಕೂರು: ತಾಲ್ಲೂಕಿನ ಹೆಬ್ಬೂರು ಹೋಬಳಿಯ ಅರಿಯೂರು ಗ್ರಾಮ ಪಂಚಾಯ್ತಿಯ ಕಟ್ಟೆಗೊಲ್ಲಹಳ್ಳಿ ಗೊಲ್ಲರಹಟ್ಟಿ ಗ್ರಾಮದಲ್ಲಿ ಸುಮಾರು 1 ಕೋಟಿ 80 ಲಕ್ಷ ರೂ.ಗಳ ಅನುದಾನದಲ್ಲಿ ಸಿ.ಸಿ. ರಸ್ತೆ ಮತ್ತು ಸಿ.ಸಿ. ಚರಂಡಿ ಕಾಮಗಾರಿಗೆ ಶಾಸಕ ಬಿ. ಸುರೇಶ್‌ಗೌಡರು ಗುರುವಾರ ಭೂಮಿ ಪೂಜೆಗೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಗೂಳೂರು ಶಿವಕುಮಾರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ದೊಡ್ಡಸಾರಂಗಿ ಶಂಕರಣ್ಣ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ನರಸಿಂಹಮೂರ್ತಿ, ಮಾಜಿ ಸದಸ್ಯ ಶೇಷ್ ಕುಮಾರ್, ಅರಿಯೂರು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ದಯಾನಂದ್, ಗೊಲ್ಲರಹಟ್ಟಿ ಕುದುರೆ ಮಾಚಪ್ಪ ದೇವಾಲಯದ ಪ್ರಧಾನ ಅರ್ಚಕರು, ಮುಖಂಡರಾದ ಪ್ರಭು, ಪರಮೇಶ್, ತಿಮ್ಮಣ್ಣ, ಬಸವರಾಜ್, ಚಿಕ್ಕಗಂಗಣ್ಣ, ಸಿದ್ದಗಂಗಪ್ಪ, ಪ್ರಭು, ಪಾಪಣ್ಣ ಇನ್ನಿತರರು ಹಾಜರಿದ್ದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಕಬ್ಬನ್ ಪಾರ್ಕ್‌ನಲ್ಲಿ ಮಾವು ಮೇಳಕ್ಕೆ ವಾಕರ್ಸ್ ವಿರೋಧ




ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ನಡೆಯಲಿರುವ ಮಾವು ಮೇಳಕ್ಕೆ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದೆ. ನಗರದಲ್ಲಿ ಪರ್ಯಾಯ ಸ್ಥಳಗಳಿದ್ದರೂ, ಪರಿಸರಕ್ಕೆ ಹಾನಿಯುಂಟಾಗುವ ಉದ್ಯಾನವನವನ್ನು ಆಯ್ಕೆ ಮಾಡಿಕೊಂಡಿರುವುದು ಅವೈಜ್ಞಾನಿಕ. ಹೀಗಾಗಿ ಕೂಡಲೇ ಮಾವು ಮೇಳವನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಪರಿಸರ ಪ್ರೇಮಿಗಳು ಒತ್ತಾಯಿಸಿದ್ದಾರೆ.

ಗರದ ಕಬ್ಬನ್ ಪಾರ್ಕ್ ಆವರಣದಲ್ಲಿ ನಾಳೆಯಿಂದ ತೋಟಗಾರಿಕೆ ಇಲಾಖೆಯು ಹಮ್ಮಿಕೊಂಡಿರುವ 'ಮಾವು ಮೇಳ'ಕ್ಕೆ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದೆ. ಉದ್ಯಾನವನದ ಆವರಣವನ್ನು ವಾಣಿಜ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದ್ದು, ಸಂಘವು ಈ ನಿರ್ಧಾರವನ್ನು ತೀವ್ರವಾಗಿ ಖಂಡಿಸಿದೆ.

ಮುಖ್ಯಾಂಶಗಳು

ಡಿಸಿಎಂ ಡಿಕೆ ಶಿವಕುಮಾರ್ ಭರವಸೆ ತೋಟಗಾರಿಕೆ ಇಲಾಖೆ ಗಾಳಿಗೆ ತೂರಿತಾ?

ಬೃಹತ್ ಮೇಳಗಳ ಆಯೋಜನೆಯಿಂದ ಪರಿಸರ ಹಾಗೂ ವನ್ಯಜೀವಿಗಳಿಗೆ ತೊಂದರೆಮಾವು ಮೇಳ ಬೇರೆಡೆಗೆ ಸ್ಥಳಾಂತರಕ್ಕೆ ಒತ್ತಾಯಇದು ಬೇಲಿಯೇ ಎದ್ದು ಹೊಲ ಮೇಯ್ದಂತೆ: ಎಸ್. ಉಮೇಶ್ ಕಿಡಿ

ಈ ಹಿಂದೆ ಕಬ್ಬನ್ ಪಾರ್ಕ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಉದ್ಯಾನವನವನ್ನು ಸಂರಕ್ಷಿಸಲಾಗುವುದು ಮತ್ತು ಯಾವುದೇ ವಾಣಿಜ್ಯ ಉದ್ದೇಶಗಳಿಗೆ ಇಲ್ಲಿ ಅವಕಾಶ ನೀಡುವುದಿಲ್ಲ ಎಂದು ಸಾರ್ವಜನಿಕರಿಗೆ ಸ್ಪಷ್ಟ ಭರವಸೆ ನೀಡಿದ್ದರು. ಆದರೆ, ಇದೀಗ ತೋಟಗಾರಿಕೆ ಇಲಾಖೆಯೇ ಮೇಳ ಆಯೋಜಿಸಲು ಮುಂದಾಗಿರುವುದು ಸರ್ಕಾರದ ಭರವಸೆಗೆ ವಿರುದ್ಧವಾಗಿದೆ ಎಂದು ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್ ಕಿಡಿಕಾರಿದ್ದಾರೆ. "ಬೇಲಿಯೇ ಎದ್ದು ಹೊಲ ಮೇಯ್ದಂತೆ" ತೋಟಗಾರಿಕೆ ಇಲಾಖೆಯು ಉದ್ಯಾನವನದ ಹಿತಾಸಕ್ತಿಯನ್ನು ಬಲಿ ಕೊಡುತ್ತಿದೆ ಎಂದು ಅವರು ಆಕ್ರೋಶ ಹೊರಹಾಕಿದ್ದಾರೆ.

ಕಬ್ಬನ್ ಪಾರ್ಕ್ ನಗರದ ಪ್ರಮುಖ ಮತ್ತು ಪರಿಸರ ಪರಂಪರೆಯ ತಾಣವಾಗಿದೆ. ಇದನ್ನು ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗ ಮಾಡುವುದು ಅದರ ಮೂಲ ಉದ್ದೇಶವನ್ನೇ ಬುಡಮೇಲು ಮಾಡಿದಂತಾಗುತ್ತದೆ. ಕಬ್ಬನ್ ಪಾರ್ಕ್‌ನಲ್ಲಿ ಇಂತಹ ಬೃಹತ್ ಮೇಳಗಳನ್ನು ಆಯೋಜಿಸುವುದರಿಂದ ಜನಸಂದಣಿ ಮತ್ತು ವಾಹನ ಸಂಚಾರ ವಿಪರೀತವಾಗಿ ಹೆಚ್ಚಲಿದೆ. ಇದರಿಂದ ಉದ್ಯಾನವನದ ಸೂಕ್ಷ್ಮ ಪರಿಸರ ವ್ಯವಸ್ಥೆ ಹಾಗೂ ವನ್ಯಜೀವಿಗಳಿಗೆ ತೀವ್ರ ತೊಂದರೆ ಉಂಟಾಗಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ಬೆಂಗಳೂರಿನಲ್ಲಿ ಮಾವು ಮೇಳದಂತಹ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ವಿಶಾಲವಾದ ಸ್ಥಳಗಳ ಕೊರತೆಯಿಲ್ಲ. ಅರಮನೆ ಮೈದಾನದಂತಹ ಬೃಹತ್ ಸ್ಥಳಗಳು ಹೆಚ್ಚಿನ ಜನಸಂದಣಿಯನ್ನು ನಿಭಾಯಿಸಲು ಹಾಗೂ ಪರಿಸರಕ್ಕೆ ಹಾನಿಯಾಗದಂತೆ ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲು ಹೆಚ್ಚು ಸೂಕ್ತವಾಗಿದೆ. ಆದರೆ ಪರಿಸರಕ್ಕೆ ಹಾನಿ ಮಾಡುವ ಉದ್ಯಾನವನವನ್ನೇ ಆರಿಸಿಕೊಂಡಿರುವುದು ಅವೈಜ್ಞಾನಿಕ ಎಂದು ಸಂಘ ದೂರಿದೆ.

ಕಬ್ಬನ್ ಪಾರ್ಕ್ ಪರಿಸರ ಸ್ನೇಹಿ ಉದ್ಯಾನವನವಾಗಿಯೇ ಉಳಿಯಬೇಕೇ ಹೊರತು ವಾಣಿಜ್ಯ ಕೇಂದ್ರವಾಗಬಾರದು. ತೋಟಗಾರಿಕೆ ಇಲಾಖೆ ಡಿಸಿಎಂ ಡಿಕೆ ಶಿವಕುಮಾರ್ ಸಾರ್ವಜನಿಕರಿಗೆ ನೀಡಿರುವ ಭರವಸೆಯನ್ನು ಗೌರವಿಸಬೇಕು. ಹೀಗಾಗಿ ಶಾಂತಿ ಮತ್ತು ಪರಿಸರವನ್ನು ಉಳಿಸುವ ನಿಟ್ಟಿನಲ್ಲಿ ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಲಾಗಿರುವ ಈ ಕಾರ್ಯಕ್ರಮವನ್ನು ಕೂಡಲೇ ಬೇರೆಡೆಗೆ ಸ್ಥಳಾಂತರಿಸಬೇಕೆಂದು ಎಸ್. ಉಮೇಶ್ ಅವರು ಒತ್ತಾಯಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# 18ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ನಾಳೆ ಮಳೆ ಸಾಧ್ಯತೆ



ಕರ್ನಾಟಕದಲ್ಲಿ ಮೇ 8ರಂದು ಹವಾಮಾನ ವೈಪರೀತ್ಯ ನಿರೀಕ್ಷಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ 42ಲಿಅ ತೀವ್ರ ಉಷ್ಣ ಅಲೆ ಇರಲಿದ್ದರೆ, ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಸಾಧಾರಣದ ಅಥವಾ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿದ್ದು, ಮಳೆಯ ಸಾಧ್ಯತೆ ಕಡಿಮೆ. ರಾಯಚೂರು, ಕಲಬುರಗಿಯಲ್ಲಿ ಬಿಸಿಲು ಹೆಚ್ಚಿರಲಿದೆ.

ಉತ್ತರ ಮತ್ತು ಕಲ್ಯಾಣ ಕರ್ನಾಟಕ ಭಾಗದ ಕೆಲವೆಡೆ ತೀವ್ರ ಬಿಸಿಯ ಹವಾಮಾನದ ನಡುವೆಯೂ ರಾಜ್ಯ ವಿವಿಧ ಜಿಲ್ಲೆಗಳಲ್ಲಿ ನಾಳೆ ಸಣ್ಣ ಅಥವಾ ಮಧ್ಯಮ ಪ್ರಮಾಣದ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡು ಭಾಗದ ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್, ವಿಜಯಪುರ ಮತ್ತು ಬಳ್ಳಾರಿಯಲ್ಲಿ ವಿಪರೀತ ಉಷ್ಣ ವಾತಾವರಣ ಇರಲಿದ್ದು, ಸುಮಾರು 42 ಡಿಗ್ರಿ ಸೆಲ್ಸಿಯಸ್ ವರೆಗೆ ತಾಪಮಾನ ಇರುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಭಾಗದ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಹಾಗೆಯೇ ಉತ್ತರ ಒಳನಾಡು ಭಾಗದ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಮತ್ತು ರಾಯಚೂರಿನಲ್ಲಿ ಸಾಧಾರಣ ಮಳೆಯ ನಿರೀಕ್ಷೆ ಇದೆ. ದಕ್ಷಿಣ ಒಳನಾಡು ಭಾಗದ ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗದಲ್ಲಿ ಭಾರಿ ಮಳೆಯ ಸಾಧ್ಯತೆ ಇದ್ದು, ಚಾಮರಾಜನರ, ದಾವಣಗೆರೆ, ಹಾಸನ, ಮಂಡ್ಯ ಮತ್ತು ಮೈಸೂರಿನಲ್ಲೂ ಸಣ್ಣ ಪ್ರಮಾಣದ ಮಳೆಯನ್ನು ಅಂದಾಜಿಸಲಾಗಿದೆ.

ಉಳಿದಂತೆ ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಒಳ ಹವೆ ಇರಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಹೇಗಿರಲಿದೆ ಬೆಂಗಳೂರು ವಾತಾವರಣ?

ಬೆಂಗಳೂರಿನಲ್ಲಿ ನಾಳೆ ಬಿಸಿಲಿನ ವಾತಾವರಣ ಇರಲಿದ್ದು ನಗರದ ಗರಿಷ್ಠ ಉಷ್ಣಾಂಶ 32 ಡಿಗ್ರಿ ಸೆಲ್ಸಿಯಸ್ ಇರಲಿದ್ದರೆ, ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ತಲುಪಲಿದೆ. ಹಗಲಿನ ವೇಳೆ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದೆಯಾದರೂ ಮಳೆಯ ಸಾಧ್ಯತೆ ತೀರಾ ಕಡಿಮೆ ಎಂದು ಅಂದಾಜಿಸಲಾಗಿದೆ. ಗಾಳಿಯ ವೇಗ ಗಂಟೆಗೆ 6.4ರಿಂದ 16 ಕಿಲೋ ಮೀಟರ್ ವರೆಗೆ ಇರಲಿದೆ ಎನ್ನಲಾಗಿದೆ.

# ನಾರಿ ಮುನಿದರೆ ತುಂಬ ತುಂಬಾನೇ ದುಬಾರಿ

ಅದೊಂದುಕಾಲದಲ್ಲಿ ಈ ದೇಶದಲ್ಲಿ,
ಅದೂ ಸಹ ಪ್ರಭುಪ್ರಭುತ್ವದಕಾಲದಲ್ಲಿಬುದ್ಧನಂಥ
ಮಹಾನುಭಾವರು, ಮಹಾವೀರರಂಥಮಹಾನುಭಾವರು
ಶಾಂತಿ, ಸಮಾಧಾನಕ್ಕಾಗಿರಾಜ್ಯ, ರಾಜಾಧಿಕಾರ,
ರಾಜ್ಯಾಧಿಕಾರ, ರಾಜಾಧಿಪತ್ಯ, ರಾಜ್ಯಾಧಿಪತ್ಯಎಲ್ಲವನ್ನೂ
ಬಿಟ್ಟುತಣ್ಣಗೆಅರಮನೆಯಿಂದ ಹೊರನಡೆದು ಹೋದರು.
ಈವಾಗ ನೋಡಿ,ಇದು ಪ್ರಭುಪ್ರಭುತ್ವದ ಕಾಲವಲ್ಲ; ಇದು
ಪ್ರಜಾಪ್ರಭುತ್ವದ ಕಾಲ.
ಈ ಕಾಲದಲ್ಲಿ, ಅದೂ ಸಹ ಪಿತ್ರಾರ್ಜಿತವಲ್ಲದ, ಜನಗಳ ಸೇವೆ
ಮಾಡುವುದಕ್ಕೆಂದೇ ಮತ್ತುಜನಕಲ್ಯಾಣಕ್ಕೆಂದೇ ಜನಗಳ ಬಳಿ
ಬಂದಂಥ ಮತ್ತು ಜನಗಳ ಸೇವಕರೆಂದು ಹೇಳಿಕೊಳ್ಳುವ ಜನಗಳು
ಅಧಿಕಾರಬಿಟ್ಟುಕೊಡುವುದಕ್ಕೆಎಷ್ಟೊಂದುಕಷ್ಟಪಡುತ್ತಾರೆ.
ಅಧಿಕಾರಎಂದರೆ ಹಾಗೇನೇ!! ಇದನ್ನೇಅಧಿಕಾರಲಾಲಸೆ
ಎನ್ನುವುದು!! ಅಧಿಕಾರವೊಂದು ವ್ಯೂಹ.
ಅಧಿಕಾರವ್ಯೂಹವಿದುಚಕ್ರವ್ಯೂಹವನ್ನೂ ಸಹ ಮೀರಿದ
ಬಹುದೊಡ್ಡ ವ್ಯೂಹ.




ಇದುಚಕ್ರವ್ಯೂಹಕ್ಕಿಂತಅಧಿಕಅಪಾಯಕಾರಿ.
ಅಧಿಕಾರವ್ಯೂಹದ ಒಳಹೋಗುವುದೂ ಕಷ್ಟ
ಒಮ್ಮೆ ಒಳಹೋಗಿಯಾದ ಮೇಲೆ ಅದರೊಳಗಿಂದ
ಹೊರಬರುವುದಂತೂತುಂಬ ತುಂಬಾನೇ ಕಷ್ಟ;
ಅಧಿಕಾರವಿದು ಬರೀ ವ್ಯೂಹ ಮಾತ್ರವಲ್ಲ; ಅದೊಂದುರಕ್ಕಸ;
ಅದೊಂದುಅಸುರ. ಈ ಅಧಿಕಾರಾಸುರ ಆ
ಬಕಾಸುರ, ಮಹಿಷಾಸುರರಿಗೂ ಮೀರಿದವ. ಅ
ಅಧಿಕಾರಾಸುರಅವರಿಗೂಕೂಡ "ಸ್ವಾಹಾ", "ಸ್ವಧಾ"
ಹೇಳಿಕೊಂಡಿದ್ದಾನೆ.
ಜನಾದೇಶಕ್ಕೆ ಬೆಲೆಯೇಇಲ್ಲ.
ಯಾವದೇಶದಲ್ಲಿತ್ಯಾಗ, ಸನ್ಯಾಸ, ಬಲಿದಾನ, ವೈರಾಗ್ಯಗಳು
ಶಿರೋಧಾರ್ಯವಾಗಿದ್ದವೋ ಅದೇದೇಶದಲ್ಲಿಈಗ
ಅವುಗಳನ್ನು ಧರಾಶಾಯಿಯಾಗಿಸಿಬಿಟ್ಟು ಅವುಗಳ ತಲೆ
ತುಳಿಯಲಾಗುತ್ತಿದೆ.
ರಾಜಕಾರಣ, ಅರಾಜಕಾರಣವಾದಾಗಆಗುವುದೇ ಹೀಗೆ.
ತಮಿಳುನಾಡು, ಕೇರಳ, ಕರ್ನಾಟಕದಲ್ಲಿಇ. ಸಿ. ಮತ್ತು ಇ.
ವಿ.ಎಮ್. ಫೇರ್& ಲವ್ಲಿ.
ಪಶ್ಚಿಮ ಬಂಗಾಲ, ಆಸ್ಸಾಮ್, ಪುದುಚೇರಿಗಳಲ್ಲಿ ಇ.
ಸಿ.ಮತ್ತು ಇ. ವಿ. ಎಮ್.ಗಳು ಫೇರ್& ಲವ್ಲಿ ಅಲ್ಲ. ಅವು
ಬಯಾಸ್ಡ್!!
ಪಶ್ಚಿಮ ಬಂಗಾಲ ಈ ದೇಶಕ್ಕೆ ಬಹಳಷ್ಟು ಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆರಾಮಕೃಷ್ಣ
ಪರಮಹಂಸರನ್ನುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆ ಸ್ವಾಮಿ ವಿವೇಕಾನಂದರನ್ನುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆರಾಷ್ಟ್ರಗೀತೆಯನ್ನು ಬರೆದುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆ ಪ್ರಪ್ರಥಮ ನೋಬಲ್ ಪ್ರಶಸ್ತಿ
ಪುರಸ್ಕೃತರನ್ನುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆರಾಷ್ಟ್ರಕವಿ
ರವೀಂದ್ರನಾಥ್‌ಟ್ಯಾಗೋರ್‌ರವರನ್ನುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆ ಸುಭಾಷಚಂದ್ರ ಬೋಸ್‌ರಂಥ
ನೇತಾಜಿಯನ್ನುಕೊಟ್ಟಿದೆ. ಪಶ್ಚಿಮ ಬಂಗಾಲ ಈ
ದೇಶಕ್ಕೆಅರವಿಂದಘೋಷರಂಥದಾರ್ಶನಿಕರನ್ನುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆಈಶ್ವರಚಂದ್ರ ವಿದ್ಯಾಸಾಗರರಂಥ
ಮೇಧಾವಿಗಳನ್ನುಕೊಟ್ಟಿದೆ.
ಪಶ್ಚಿಮ ಬಂಗಾಲ ಈ ದೇಶಕ್ಕೆ"ವಂದೇ ಮಾತರಮ್" ಬರೆದುಕೊ
ಟ್ಟಬಂಕಿಮಚಂದ್ರಚಟ್ಟೋಪಾಧ್ಯಾಯರನ್ನುಕೊಟ್ಟಿದೆ
ಪಶ್ಚಿಮ ಬಂಗಾಲ ಈ ದೇಶಕ್ಕೆಆಸ್ಕರ್

ಡಾ. ಶಿವಾನಂದ ಶಿವಾಚಾರ್ಯ ಶ್ರೀಗಳು
ಸುಕ್ಷೇತ್ರ ಹಿರೇಮಠ, ತಪೋವನ, ತುಮಕೂರು




# ರಾಮನಗರ ನಗರಸಭೆಯಿಂದ ಬಸವೇಶ್ವರರ ಪುತ್ಥಳಿ ಅನಾವರಣ

ಸೂರ್ಯಪ್ರಗತಿ ನ್ಯೂಸ್.ಕಾಂ

ರಾಮನಗರ: ಈಗಾಗಲೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ಸ್ಥಾಪಿಸಿರುವ ಇತರ ಸ್ಥಳೀಯ ಸಂಸ್ಥೆಗಳಿಗೆ ಮಾದರಿಯಾಗಿರುವ ರಾಮನಗರ ನಗರಸಭೆಯಲ್ಲಿ ಇಂದು ಸಮ ಸಮಾಜದ ನಿರ್ಮಾಣ, ಪ್ರಜಾಪ್ರಭುತ್ವದ ಕಲ್ಪನೆಯನ್ನು 12ನೇ ಶತಮಾನದಲ್ಲೇ ಪ್ರತಿಪಾದಿಸಿದ ಬಸವಣ್ಣನವರ ಪುತ್ಥಳಿಯನ್ನು ಸ್ಥಾಪಿಸಲಾಗುತ್ತಿದೆ.

ಇಂದು ಮೇ 8ರ ಸಂಜೆ 4.30ಕ್ಕೆ ನಗರಸಭೆಯ ಆವರಣದಲ್ಲಿ ವಿಶ್ವಗುರು ಬಸವೇಶ್ವರರ ಪುತ್ಥಳಿ ಅನಾವರಣಗೊಳ್ಳಲಿದೆ. ತದನಂತರ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ. ಬಸವೇಶ್ವರರ ಪುತ್ಥಳಿಯನ್ನು ನ್ಯಾಯಮೂರ್ತಿಗಳಾದ ನಾಗಮೋಹನ ದಾಸ್ ಅನಾವರಣಗೊಳಿಸಲಿದ್ದಾರೆ. ಬಸವ ಜಯಂತಿ ಕಾರ್ಯಕ್ರಮವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಮೈಸೂರು ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹಾಗೂ ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ. ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳ ಆಶೀರ್ವಚನ ಇರಲಿದೆ. ಇವರೊಟ್ಟಿಗೆ ವಿವಿಧ ಮಠಾಧೀಶರ ಉಪಸ್ಥಿತಿ ಇರಲಿದೆ.

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿಯವರು ಉಪಸ್ಥಿತರಿರುವರು. ಸಂಸದ ಡಾ.ಸಿ.ಎನ್. ಮಂಜುನಾಥ್ ಮತ್ತು ರಾಜ್ಯ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಎಚ್. ಎಂ.ರೇವಣ್ಣ ಅವರ ಗೌರವ ಉಪಸ್ಥಿತಿ ಇರಲಿದೆ. ಜಿಲ್ಲೆಯ ಶಾಸಕರು ಭಾಗವಹಿಸಲಿದ್ದಾರೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ (ಶಶಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸದುದ್ದೇಶದ ಚಿಂತನೆಗೆ ನಾಗರೀಕರ ಸ್ವಾಗತ



ಸಾರ್ವಜನಿಕರಿಗೆ ತೀರಾ ಹತ್ತಿರವಾದ ಸರ್ಕಾರಿ ಸಂಸ್ಥೆ ಸ್ಥಳೀಯ ಸಂಸ್ಥೆಗಳು, ಒಂದಿಲ್ಲೊಂದು ಕಾರಣಕ್ಕೆ ನಾಗರೀಕರು ಹಾಗೂ ಸ್ಥಳೀಯ ಸಂಸ್ಥೆಗಳ ಒಡನಾಟ ಇದ್ದೇ ಇರುತ್ತದೆ. ಭವ್ಯ ಭಾರತದ ನಿರ್ಮಾಣಕ್ಕೆ ಶ್ರಮಿಸಿದವರು, ಸಮಾಜ ಸುಧಾರಕರನ್ನು ನಗರಸಭೆಗೆ ಬರುವ ಪ್ರತಿ ನಾಗರೀಕನು ಸ್ಮರಿಸಿಬೇಕು ಎಂಬ ಸದುದ್ದೇಶದಿಂದ ಪುತ್ಥಳಿಗಳನ್ನು ಸ್ಥಾಪಿಸಲಾಗುತ್ತಿದೆ ಎಂಬುದು ಕೆ.ಶೇಷಾದ್ರಿ ಮತ್ತು ನಗರಸಭಾ ಸದಸ್ಯರ ಅಭಿಪ್ರಾಯ. ನಗರಸಭಾಧ್ಯಕ್ಷರು ಮತ್ತು ಸದಸ್ಯರ ಈ ಅಭಿಪ್ರಾಯಕ್ಕೆ ನಗರದ ಹಲವು ನಿವಾಸಿಗಳು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# "ಪ್ರಾಣಿಗಳೇ ಗುಣದಲ್ಲಿ ಮೇಲು, ಮಾನವನ ದಕ್ಕಿಂತ ಕೀಳು.... ಉಪಕಾರವ ಮಾಡಲಾರ ಬದುಕಿದರೂ ಸೈರಿಸಲಾರ....

ನಾವುಗಳು ಚಿಕ್ಕ ಹುಡುಗರಿದ್ದಾಗ ಈ ಮೇಲಿನ ಸಾಲುಗಳನ್ನು ಆಲಿಸುತ್ತೀದ್ದೆವು! ಇಂದು ಸರಿಸುಮಾರು 35 ವರುಷಗಳಿಂದ ಪ್ರತೀ ಬೇಸಿಗೆಯ ಭಯಾನಕ ಸ್ಥಿತಿಯಲ್ಲಿ ಮೂಕ ಪ್ರಾಣಿಗಳಿಗೆ ಮೇವು, ಆಹಾರ, ನೀರುಗಳನ್ನು ಒದಗಿಸುತ್ತಾ ಬರುತ್ತಿರುವ ನಮಗೆ ಅತ್ಯಂತ ಅದ್ಭುತವಾದ ಅನುಭವಗಳು ದೊರೆತಿವೆ. ಈ ಮೂಕ ಪ್ರಾಣಿಗಳೊಂದಿಗೆ ಒಡನಾಟ ಇಟ್ಟುಕೊಂಡಿದ್ದ ಫಲವಾಗಿ ಅವುಗಳ ಶುದ್ಧ ಪ್ರೀತಿ, ವಾತ್ಸಲ್ಯ ಹಾಗೂ ಅವುಗಳು ತೋರುವ ಅಪರಮಿತ ಜ್ಞಾಪಕಶಕ್ತಿ ನಮಗೆ ನಿಜಕ್ಕೂ ಆಶ್ಚರ್ಯ ತಂದಿದೆ.

ಮಾನವನಿಗೆ ಎಷ್ಟೇ ಉಪಕಾರಮಾಡಲಿ, ಎಷ್ಟೇ ಸಲುಹಲಿ , ರಕ್ಷಿಸಲಿ, ಸಹಾಯಮಾಡಲಿ, ಆಧರಿಸಲಿ ಎಲ್ಲವನ್ನು ಕೆಲವೇ ಸಮಯದಲ್ಲಿ ಸಂಪೂರ್ಣ ಮರೆತು ಮಾನವರೂಪದ ರಾಕ್ಷಸರಂತೆ ವರ್ತಿಸುವುದನ್ನು ಎಲ್ಲೆಲ್ಲಿಯೂ ಕಾಣಬಹುದಾಗಿದೆ. ಇಂತಹ ಸಂದರ್ಭದಲ್ಲಿ ನಾವುಗಳು ಮೂಕಪ್ರಾಣಿಗಳಿಗೆ ಮೇವು, ನೀರು, ಪೌಷ್ಟಿಕ ಆಹಾರ ನೀಡುತ್ತಾ ಅವುಗಳಿಗೆ ಆಧರಿಸುತ್ತ ಇರುವ ಸಮಯದಲ್ಲಿ ದೂರ ದೂರದ ಚಿತ್ರದುರ್ಗ, ಬಳ್ಳಾರಿ, ಹೊಸಪೇಟೆ, ಕೂಡ್ಲಗಿ, ವಿಜಯನಗರ ಪ್ರದೇಶಗಳಲ್ಲಿ ಸಾವಿರಾರು ದೇವರ ಹಸುಗಳನ್ನು ಕಂಡಾಗ ಅವುಗಳು ಅತ್ಯಂತ ಪ್ರೀತಿಯಿಂದ ನಮ್ಮನ್ನು ಆಧರಿಸುವುದನ್ನು ಕಂಡಾಗ ಭಾವುಕರಾಗುತ್ತೇವೆ. ವಿಶೇಷವಾಗಿ ಕಾವಿಬಣ್ಣದ ವಸ್ತ್ರವನ್ನು ಕಂಡಾಕ್ಷಣ ಓಡಿಬಂದು ಮುದ್ಧಿಸುವುದು, ಹತ್ತಿರಬಂದು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವುದನ್ನು ಕಂಡಾಗಲೆಲ್ಲ ಈ ಮನುಷ್ಯರೇಕೆ ರಾಕ್ಷಸ ರಂತೆ ವರ್ತಿಸುತ್ತಾರೆ ಎಂಬ ಪ್ರಶ್ನೆ ಸದಾಕಾಲ ನಮ್ಮನ್ನು ಕಾಡುತ್ತದೆ.

ಎಂತಹ ಮಾನವರೂಪಿ ರಾಕ್ಷಸರಿರುತ್ತಾರೆ ಎಂದರೆ ಸರ್ವರೀತಿಯ ಸಹಾಯ,ಕಾಲಕಾಲಕ್ಕೆ ಧನ ಸಹಾಯದ ನೆರವು, ಎಲ್ಲದಕ್ಕಿಂತ ಮಿಗಿಲಾಗಿ ಜೀವನವನ್ನೇ ರೂಪಿಸಿದವರಿಗೆ ಕರ್ಕೋಟಕ ವಿಷವನ್ನು ಕಾರುವ ಪ್ರವೃತ್ತಿಹೊಂದಿರುವ ಮಾನವರೂಪಿ ರಾಕ್ಷರನ್ನು ಕಂಡಾಗ ಈ ಮೂಕ ಪ್ರಾಣಿಗಲೇ ಲೇಸು ಎಂಬ ಸತ್ಯತೆ ಅರಿವಾಗುವುದರಲ್ಲಿ ಸಂದೇಹವಿಲ್ಲ. ಒಮ್ಮೆ ಯೋಚಿಸಿನೋಡಿ ಅಲ್ಲವೇ.........
ಜೈ ಸ್ವಾಮಿ ವಿವೇಕಾನಂದ!!!

# ರಾಮನಗರ ಸುದ್ದಿ ಕಾರ್ನರ್

## 26ರ ತರುಣಿಯ ಪ್ರೀತಿಯಲ್ಲಿ ಬಿದ್ದ 15 ವರ್ಷದ ಬಾಲಕ

### ಮನೆಯವರ ಪ್ರೀತಿ ಅಡ್ಡಿಗೆ ವಿಷ ಸೇವಿಸಿ ಆತ್ಮಹತ್ಯೆ: ಪ್ರೇಯಸಿ ವಿರುದ್ಧ ದೂರು

ಸೂರ್ಯ ಪ್ರಗತಿ ನ್ಯೂಸ್.ಕಾಂ

ರಾಮನಗರ : 26ರ ತರುಣಿಯ ಪ್ರೀತಿಯಲ್ಲಿ ಬಿದ್ದ 15 ವರ್ಷದ ಬಾಲಕ, ಮನೆಯವರು ಪ್ರೀತಿಗೆ ಅಡ್ಡಿಪಡಿಸಿದರು ಎಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚನ್ನಪಟ್ಟಣ ನಗರದ ರಾಜಾಕೆಂಪೇಗೌಡ ಬಡಾವಣೆಯಲ್ಲಿ ನಡೆದಿದೆ.

ಬಿಡದಿ ಮೂಲದ 15 ವರ್ಷದ ಬಾಲಕ ಬಿಡದಿಯ ನಿವಾಸಿ ಶೋಭಾ ಎಂಬ 26 ವರ್ಷದ ಯುವತಿಯ ಜೊತೆ ಪ್ರೀತಿಯಲ್ಲಿ ಬಿದಿದ್ದ. ಈ ವಿಷಯ ತಿಳಿದ ಯುವಕನ ತಂದೆ ತಾಯಿ, ನಿಮ್ಮಬ್ಬರ ನಡುವೆ ಸಾಕಷ್ಟು ವಯಸ್ಸಿನ ಅಂತರವಿದೆ. ಇದು ಸರಿಯಲ್ಲ ಎಂದು ಬುದ್ದಿವಾದ ಹೇಳಿ ಇಬ್ಬರೂ ಸಂಪರ್ಕಿಸದಂತೆ ನಿರ್ಬಂಧ ಹಾಕಿದ್ದರು.

ಆದರೂ, ವಾಟ್ಸಪ್, ಇನ್‌ಸ್ಟಾಗ್ರಾಂ ಮೂಲಕ ಇಬ್ಬರು ಸಂಪರ್ಕದಲ್ಲಿದ್ದರು. ಇದಾದ ಬಳಿಕ ಮನೆ ಬಿಟ್ಟು ಹೋಗಿದ್ದ ಬಾಲಕ ಚನ್ನಪಟ್ಟಣದ ನನ್ನ ಸ್ನೇಹಿತನ ಮನೆಯಲ್ಲಿ ಸುಮಾರು 25 ದಿನಗಳಿಂದ ವಾಸವಿದ್ದು, ನನ್ನ ಸ್ನೇಹಿತನ ಮನೆಯಲ್ಲಿ ಇರುತ್ತೇನೆ ಎಂದು ಪೋಷಕರಿಗೂ ತಿಳಿಸಿದ್ದ. ಏ.29ರಂದು ಸಂಜೆ ತನ್ನ ತಾಯಿಗೆ ಮೊಬೈಲ್ ಪೋನ್‌ನಲ್ಲಿ ಕರೆಮಾಡಿದ್ದ ಬಾಲಕ, ನಾನು ಮತ್ತು ಶೋಭಾ ಜೊತೆಯಾಗಿ ಇರಲು ನೀವು ಬಿಡುತ್ತಿಲ್ಲ. ಅವಳು ಹೇಳಿದಂತೆ ನಾನು ಏನಾದರೂ ಮಾಡಿಕೊಂಡು ಸಾಯುತ್ತೇನೆ. ಎಂದು ಹೇಳಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಬಾಲಕನ ಸ್ನೇಹಿತರು ಈತನನ್ನು ಚನ್ನಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಬಾಲಕನ



ತಂದೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಬಾಲಕ ಮೇ.3 ರ ಸಂಜೆ ಸಾವಿಗೀಡಾಗಿದ್ದಾನೆ. ಈ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

**ಪ್ರೇಯಸಿ ವಿರುದ್ಧ ದೂರು..**

ಮಗ ಸಾವಿಗೀಡಾದ ಹಿನ್ನೆಲೆಯಲ್ಲಿ ನನ್ನ ಮಗನ ಸಾವಿಗೆ ಆತನ ಪ್ರೇಯಸಿ ಶೋಭಾ ಕಾರಣ, ಚಿಕ್ಕ ಹುಡುಗನಿಗೆ ಇಲ್ಲ ಸಲ್ಲದನ್ನು ಹೇಳಿ ಆತ ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರಚೋದಿಸಿದ್ದಾಳೆ ಎಂದು ಆರೋಪಿಸಿ ಶೋಭಾ ವಿರುದ್ಧ ಬಾಲಕನ ತಂದೆ ಚನ್ನಪಟ್ಟಣ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ



ರಾಮನಗರ ಹಾರೋಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ ಇಬ್ಬರು ಸರಗಳ್ಳರ ಬಂಧನ ಬೆಂಗಳೂರು ಆನೇಕಲ್ ಮೂಲದ ಲೋಕೇಶ್ ಹಾಗೂ ರಮೇಶ್ ಬಂಧಿತರು ನಾಲ್ಕು ಲಕ್ಷ ರೂ ಮೌಲ್ಯದ 26 ಗ್ರಾಂ ಚಿನ್ನಾಭರಣ ಹಾಗೂ ಒಂದು ಬೈಕ್ ವಶಕ್ಕೆ ಮೇ 4 ರಂದು ನರಿಪುರ ಗೇಟ್ ಲಕ್ಕಮ್ಮ ಎಂಬ ಮಹಿಳೆಯ ಮಾಂಗಲ್ಯ ಸರ ಕಳ್ಳತನ ಮಾಡಿದ್ದ ಆರೋಪಿಗಳು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪಾರ್ಕ್ ಜಾಗ ಅತಿಕ್ರಮಣ ರಸ್ತೆ ಚರಂಡಿ ನಿರ್ಮಾಣ

### ಅಧಿಕಾರಿಗಳು ಶಾಮೀಲು ಲೋಕಾಯುಕ್ತ ಕಚೇರಿಯಲ್ಲಿ ದೂರು ದಾಖಲು

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ತಾಲ್ಲೂಕಿನ ಬಿಡದಿ ಭಾಗದಲ್ಲಿ ದಿನದಿಂದ ದಿನಕ್ಕೆ ಭೂಮಿಯ ಬೆಲೆ ಗಗನಕ್ಕೇರುತ್ತಿದ್ದಂತೆ ಅಕ್ರಮಗಳು ಕೂಡ ಹೆಚ್ಚಾಗುತ್ತಿವೆ. ಖಾಸಗಿ ಲೇಔಟ್‌ನಲ್ಲಿ ಪಾರ್ಕ್ ನಿರ್ಮಾಣಕ್ಕಾಗಿ ಮೀಸಲಿದ್ದ ಜಾಗವನ್ನು ಪುರಸಭೆ ಅಧಿಕಾರಿಗಳು ಕೆಲವು ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಶಾಮೀಲಾಗಿ ಅತಿಕ್ರಮಣ ಮಾಡಿರುವ ಕುರಿತು ಲೋಕಾಯುಕ್ತ ಕಚೇರಿಯಲ್ಲಿ ದೂರು ದಾಖಲಾಗಿದೆ.

ಬೆಂಗಳೂರು ಮಹಾನಗರಕ್ಕೆ ಅತೀ ಸಮೀಪದಲ್ಲಿ ಬಿಡದಿ ಪಟ್ಟಣ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕಾರಣ ಈ ಭಾಗದಲ್ಲಿ ಭೂಮಿಗೆ ಬಂಗಾರದ ಬೆಲೆ ಬಂದಿದೆ. ಹಾಗಾಗಿ ಕೆಲವು ರಿಯಲ್ ಎಸ್ಟೇಟ್ ಮಾಫಿಯಾದವರು ಅಧಿಕಾರಿಗಳ ಜತೆ ಸೇರಿ ಸರಕಾರಿ ಜಾಗವನ್ನು ಕಬಳಿಸುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ.

ಇದರ ಮುಂದುವರೆದ ಭಾಗವಾಗಿ ಬಿಡದಿ ಪುರಸಭೆ ವ್ಯಾಪ್ತಿಯ 8ನೇ ವಾರ್ಡ್ ವ್ಯಾಪ್ತಿಯಲ್ಲಿನ ಖಾಸಗಿ ಬಡಾವಣೆಯಲ್ಲಿ ಉದ್ಯಾನವನಕ್ಕೆ ಮೀಸಲಿಟ್ಟಿದ್ದ ಜಾಗವನ್ನ ಒತ್ತುವರಿ ಮಾಡಿಕೊಂಡು ರಸ್ತೆ ನಿರ್ಮಿಸುವ ಕೆಲಸ ಸದ್ದಿಲ್ಲದೆ ನಡೆಯುತ್ತಿದೆ. ಪಾರ್ಕ್ ಜಾಗದ ರಕ್ಷಣೆಗೆ ಕಾಮಗಾರಿ ನಿಲ್ಲಿಸುವಂತೆ ಸ್ಥಳೀಯ ನಾಗರಿಕರು ಬಿಡದಿ ಪುರಸಭೆ, ತಾಲ್ಲೂಕು ತಹಸೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೂ ಮನವಿ ಮಾಡಿದ್ದಾರೆ. ಅಲ್ಲದೆ ಶಾಸಕ ಬಾಲಕೃಷ್ಣರನ್ನೂ ಭೇಟಿ ಮಾಡಿ ಕೋರಿದರೂ ಯಾವ ಪ್ರಯೋಜನವಾಗಿಲ್ಲ. ಇದರ ವಿರುದ್ಧ ಸಾಮಾಜಿಕ ಹೋರಾಟಗಾರರು ಇದೀಗ ಕಾನೂನಿನ ಮೊರೆ ಹೋಗಿದ್ದಾರೆ.

**ಉದ್ಯಾನವನದ ಜಾಗದಲ್ಲಿ ರಸ್ತೆ:**

ಪುರಸಭೆ 8ನೇ ವಾರ್ಡ್ ವ್ಯಾಪ್ತಿಯ ಸಿಸ್ತಾ ವಸತಿ ಬಡಾವಣೆಯಲ್ಲಿ ಸಾರ್ವಜನಿಕ ಉದ್ಯಾನವನಕ್ಕಾಗಿ 1798 ಅಡಿ ವಿಸ್ತೀರ್ಣದ ಜಾಗವನ್ನು ಮೀಸಲಿಡಲಾಗಿದೆ. ಸದರಿ ಜಾಗದಲ್ಲಿ ಮತ್ತೊಂದು ಖಾಸಗಿ ಲೇಔಟ್‌ಗೆ ಸಂಪರ್ಕ ರಸ್ತೆ ಕಲ್ಪಿಸಲು ಅಕ್ರಮವಾಗಿ ಪಾರ್ಕ್ ಜಾಗವನ್ನು ಕಬಳಿಸಲಾಗುತ್ತಿದೆ. ಈ ಬಗ್ಗೆ 2024ರಿಂದಲೂ ದೂರು ನೀಡಿದರೂ ಯಾವ ಅಧಿಕಾರಿಗಳು ಗಮನಹರಿಸುತ್ತಿಲ್ಲ. ಪಾರ್ಕ್ ಜಾಗದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸಲು ಖಾಸಗಿ ಲೇಔಟ್‌ನ



ಮಾಲೀಕರು ಮುಂದಾಗಿದ್ದಾರೆ.

ಸಿಸ್ತಾ ಬಡಾವಣೆ ಪಕ್ಕದಲ್ಲಿರುವ ಖಾಸಗಿ ಲೇಔಟ್‌ನಲ್ಲಿರುವ ಅನೇಕ ನಿವೇಶನಗಳಿಗೆ ರಸ್ತೆ ಸಂಪರ್ಕವೇ ಇರುವುದಿಲ್ಲ. ಬಡಾವಣೆಯ ನಕ್ಷೆಯಲ್ಲಿ ನಾಮಕಾವಸ್ತೆಗೆ ರಸ್ತೆ ತೋರಿಸಿದ್ದು ವಾಸ್ತವದಲ್ಲಿ ರಸ್ತೆ ಇರುವುದಿಲ್ಲ. ಹಾಗಾಗಿ ಸಿಸ್ತಾ ಬಡಾವಣೆಯಲ್ಲಿ ಉದ್ಯಾನವನಕ್ಕೆ ಮೀಸಲಿದ್ದ ಜಾಗದಲ್ಲಿ ರಸ್ತೆ ನಿರ್ಮಿಸಲು ಮುಂದಾಗಿರುವುದು ಕಂಡುಬಂದಿದೆ. ಕಾಮಗಾರಿ ನಿಲ್ಲಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಸಾಮಾಜಿಕ ಕಾರ್ಯಕರ್ತರು ಇದೀಗ ಲೋಕಾಯುಕ್ತ ಕಚೇರಿಗೆ

> ಬಿಡದಿ ಪುರಸಭೆ 8ನೇ ವಾರ್ಡ್ ವ್ಯಾಪ್ತಿಯಲ್ಲಿರುವ ಸಿಸ್ತಾ ವಸತಿ ಬಡಾವಣೆಯಲ್ಲಿ ಉದ್ಯಾನವನಕ್ಕೆ ಮೀಸಲಿಟ್ಟಿರುವ ಜಾಗದಲ್ಲಿ ಅಕ್ರಮವಾಗಿ ರಸ್ತೆ ಮತ್ತು ಚರಂಡಿ ನಿರ್ಮಿಸಲಾಗುತ್ತಿದೆ. ಈ ಬಗ್ಗೆ ಪುರಸಭೆ ಅಧಿಕಾರಿಗಳು, ಜನಪ್ರತಿನಿಧಿಗಳು ತಾಲ್ಲೂಕು ತಹಸೀಲ್ದಾರ್, ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟಿದ್ದೇವೆ. ಇತ್ತೀಚೆಗೆ ಶಾಸಕ ಬಾಲಕಷ್ಣ ಅವರನ್ನೂ ನಾವು ಭೇಟಿ ಮಾಡಿ ಆಗಿರುವ ಲೋಪಗಳ ಬಗ್ಗೆ ಮನವರಿಕೆ ಮಾಡಿದರೂ ಸಹ ಸ್ಪಂದಿಸಲಿಲ್ಲ. ಹಾಗಾಗಿ ಈಗ ಲೋಕಾಯುಕ್ತ ಕಚೇರಿಯಲ್ಲಿ ದೂರು ದಾಖಲಿಸಿದ್ದೇವೆ.–
>
> ಆರ್.ಹೆಚ್.ರಾಜಶೇಖರ್, ಅಧ್ಯಕ್ಷರು,
> ಸಿಸ್ತಾ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ(ರಿ).

## ರಾಮನಗರ ನಗರ ಸಭೆಯಿಂದ ಬಸವ ಜಯಂತೋತ್ಸವ

ರಾಮನಗರ: ಈಗಾಗಲೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಸ್ಥಾಪಿಸಿರುವ ಇತರ ಸ್ಥಳೀಯ ಸಂಸ್ಥೆಗಳಿಗೆ ಮಾದರಿಯಾಗಿರುವ ರಾಮನಗರ ನಗರಸಭೆಯಲ್ಲಿ ಇಂದು ಸಮ ಸಮಾಜದ ನಿರ್ಮಾಣ, ಪ್ರಜಾಪ್ರಭುತ್ವದ ಕಲ್ಪನೆಯನ್ನು 12ನೇ ಶತಮಾನದಲ್ಲೇ ಪ್ರತಿಪಾದಿಸಿದ ಬಸವಣ್ಣನವರ ಪುತ್ಥಳಿಯನ್ನು ಸ್ಥಾಪಿಸಲಾಗುತ್ತಿದೆ.

ಇಂದು ಮೇ 8ರ ಸಂಜೆ 4.30ಕ್ಕೆ ನಗರಸಭೆಯ ಆವರಣದಲ್ಲಿ ವಿಶ್ವಗುರು ಬಸವೇಶ್ವರರ ಪುತ್ಥಳಿ ಅನಾವರಣಗೊಳ್ಳಲಿದೆ. ತದನಂತರ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ. ಬಸವೇಶ್ವರರ ಪುತ್ಥಳಿಯನ್ನು ನ್ಯಾಯಮೂರ್ತಿಗಳಾದ ನಾಗಮೋಹನ ದಾಸ್ ಅನಾವರಣಗೊಳಿಸಲಿದ್ದಾರೆ. ಬಸವ ಜಯಂತಿ ಕಾರ್ಯಕ್ರಮವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಮೈಸೂರು ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹಾಗೂ ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ. ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳ ಆಶೀರ್ವಚನ ಇರಲಿದೆ. ಇವರೊಟ್ಟಿಗೆ ವಿವಿಧ ಮಠಾಧೀಶರ ಉಪಸ್ಥಿತಿ ಇರಲಿದೆ.

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿಯವರು ಉಪಸ್ಥಿತರಿರುವರು. ಸಂಸದ ಡಾ.ಸಿ.ಎನ್.ಮಂಜುನಾಥ್ ಮತ್ತು ರಾಜ್ಯ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರ ಗೌರವ ಉಪಸ್ಥಿತಿ ಇರಲಿದೆ. ಜಿಲ್ಲೆಯ ಶಾಸಕರು ಭಾಗವಹಿಸಲಿದ್ದಾರೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ (ಶಶಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅನುದಾನಿತ ಶಾಲಾ ಶಿಕ್ಷಕರಿಗೆ ವೇತನ ಬಿಡುಗಡೆಗೆಅಗ್ರಹ



ಕುಣಿಗಲ್:ಅನುದಾನಿತ ಶಾಲಾ ಶಿಕ್ಷಕರಿಗೆ ಕಳೆದ ಎರಡು ತಿಂಗಳಿಂದ ವೇತನ ಪಾವತಿ ಆಗದೆ ಅನುದಾನಿತ ನೌಕರರು ಸಂಕಷ್ಟದಲ್ಲಿದ್ದ ವೇತನ ಪಾವತಿಯಾಗದೆ ಇರುವುದು ಜೀವನ ನಡೆಸಲು ಸಂಕಷ್ಟವನ್ನು ತಂದೊಡ್ಡಿದೆ ಈ ಕೂಡಲೇ ನೌಕರರಿಗೆ ವೇತನ ನೀಡುವಂತೆ ಕರ್ನಾಟಕ ರಾಜ್ಯ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ನಿಡುಸಾಲೆ ಪ್ರಸಾದ್ ಕ್ರಮವಹಿಸುವುದು ಒತ್ತಾಯಿಸುತ್ತಾ ಹಾಗೂ ಸರ್ಕಾರಿ ನೌಕರರ ಮಾದರಿಯಲ್ಲಿ 1ನೇ ತಾರೀಕು ವೇತನ ಪಾವತಿಯಾಗುವಂತೆ ವ್ಯವಸ್ಥೆ ಮಾಡುವಂತೆ ಹಾಗೂ ಸರ್ಕಾರಿ ಶಾಲಾ ಮಕ್ಕಳಿಗೆ ನೀಡುವ ಸಮವಸ್ತ್ರ ಶು ಟೈ ಹಾಗೂ ಇತರೆ ಸೌಲಭ್ಯಗಳನ್ನು ಅನುದಾನಿತ ವಿದ್ಯಾರ್ಥಿಗಳಿಗೂ ವಿಸ್ತರಿಸಿ ಈ ಮಲತಾಯಿ ಧೋರಣೆಯನ್ನು ಕೈ ಬಿಟ್ಟು ಸಾಮಾಜಿಕ ನ್ಯಾಯ ನೀಡುವಂತೆ ಒತ್ತಾಯ ಪಡಿಸಿದ್ದಾರೆ

## ಡ್ರಗ್ಸ್ ಮುಕ್ತ ಪಟ್ಟಣ, ಜನಸ್ನೇಹಿ ವಾತಾವರಣ ನಿರ್ಮಾಣಕ್ಕೆ ಪೊಲೀಸರೊಂದಿಗೆ ಸಹಕರಿಸಿ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಸ್ಥಳೀಯ ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲು ಜನಸಂಪರ್ಕ ಸಭೆಗಳು ಉತ್ತಮ ವೇದಿಕೆಗಳಾಗಿವೆ. ಜನಸ್ನೇಹಿ ವಾತಾವರಣ ನಿರ್ಮಾಣಕ್ಕೆ ಪೊಲೀಸರ ಜತೆಗೆ ಸಾರ್ವಜನಿಕರ ಸಹಕಾರ ಬಹುಮುಖ್ಯವಾಗಿದೆ ಎಂದು ಬಿಡದಿ ಪೊಲೀಸ್ ಠಾಣೆ ನಿರೀಕ್ಷಕ ಆರ್.ವಿಜಯ್‌ಕುಮಾರ್ ಹೇಳಿದರು.

ತಾಲ್ಲೂಕಿನ ಬಿಡದಿ ಪುರಸಭೆ ಕಚೇರಿ ಆವರಣದಲ್ಲಿ ಬಿಡದಿ ಪೊಲೀಸ್ ವತಿಯಿಂದ ಆಯೋಜಿಸಲಾಗಿದ್ದ ಸಾರ್ವಜನಿಕ ಜನಸಂಪರ್ಕ ಸಭೆಯಲ್ಲಿ ಮಾತನಾಡಿ, ಸ್ಥಳೀಯವಾಗಿ ನಡೆಯಬಹುದಾದ ಕೆಲವು ಘಟನೆಗಳು ಅಥವಾ ತಮ್ಮ ಬಡಾವಣೆಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಓಡಾಡುವ ಅಪರಿಚಿತ ವ್ಯಕ್ತಿಗಳು ಮತ್ತು ವಾಹನಗಳ ಬಗ್ಗೆ ಪೊಲೀಸರಿಗೆ ಮುಂಚಿತವಾಗಿ ಮಾಹಿತಿ ನೀಡಿದಾಗ ಮುಂದಾಗುವ ಅನಾಹುತಗಳನ್ನು ತಡೆಯಬಹುದಾಗಿದೆ. ಹಾಗಾಗಿ ಜನಸಂಪರ್ಕ ಸಭೆಗಳು ಪೊಲೀಸರು ಹಾಗೂ ಜನರ ನಡುವೆ ಉತ್ತಮ ಬಾಂಧವ್ಯವನ್ನು ವೃದ್ಧಿಸುತ್ತವೆ ಎಂದರು.

**ಪೊಲೀಸರ ಬಗ್ಗೆ ಭಯ ಬೇಡ:**

ಪೊಲೀಸರ ಬಗ್ಗೆ ಭಯ ಅಥವಾ ಹಿಂಜರಿಕೆ ಬೇಡ, ಯಾವುದೇ ಸಮಸ್ಯೆಗಳು ಅಥವಾ ಶಂಕೆಗಳಿದ್ದರೆ ಮನಬಿಚ್ಚಿ ಮಾತನಾಡಬೇಕು. ನಿಮ್ಮ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಪರಿಹಾರ ದೊರಕಿಸಿಕೊಡುವುದು ನಮ್ಮ ಕರ್ತವ್ಯ. ಬೀಟ್ ಪೊಲೀಸರೊಂದಿಗೆ ಸಂಪರ್ಕ ಇಟ್ಟುಕೊಂಡು ಮುನ್ನೆಚ್ಚರಿಕೆ ವಹಿಸುವುದರಿಂದ ಕೆಲವು ಘೋರ ಅಪರಾಧಗಳನ್ನು ತಪ್ಪಿಸಬಹುದಾಗಿದೆ. ಮಾಹಿತಿದಾರರ ಹೆಸರನ್ನು ಗೌಪ್ಯವಾಗಿ ಇಡಲಾಗುವುದು. ಜನಸ್ನೇಹಿ ವಾತಾವರಣ ನಿರ್ಮಾಣಕ್ಕೆ



ನಿಮ್ಮ ಸಹಕಾರ ತೀರಾ ಅಗತ್ಯವಾಗಿವೆ ಎಂದು ಧೈರ್ಯ ತುಂಬಿದರು.

ಸ್ಥಳೀಯವಾಗಿ ನಡೆಯುವ ವಿದ್ಯಾಮಾನಗಳ ಬಗ್ಗೆ ಪೊಲೀಸ್‌ರಿಗೆ ಸಾರ್ವಜನಿಕರಿಂದ ಸಲಹೆ ಸೂಚನೆಗಳು ಬೇಕು. ನಿಮ್ಮೆಲ್ಲರ ಸಲಹೆ ಪಡೆದು ಸಮಸ್ಯೆಗಳನ್ನು ನಿವಾರಿಸಲು ನಾವು ರೂಪುರೇಷೆ ಸಿದ್ದಪಡಿಸಲು ಅನುಕೂಲವಾಗುತ್ತದೆ. ಪೊಲೀಸ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇವೆ. 24*7 ಜನರ ಸೇವೆಗಾಗಿ 112 ಸಹಾಯವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು. ಸಾಮಾಜಿಕ ಜಾಲತಾಣದಲ್ಲಿ ಬರುವ ಕೆಲ ಸುದ್ದಿಗಳು ತಿರುಚಲಾಗಿರುತ್ತವೆ ಹಾಗೂ ಸುಳ್ಳಿನಿಂದ ಕೂಡಿರುತ್ತವೆ. ಊಹಾಪೋಹಗಳನ್ನು ನಂಬಬಾರದು ಎಂದು ಕಿವಿಮಾತು ಹೇಳಿದರು.

**ಬಾಡಿಗೆದಾರರ ಮಾಹಿತಿ ನೀಡಿ:**

ಬೆಂಗಳೂರು ಮಹಾನಗರಕ್ಕೆ ಹೊಂದಿಕೊಂಡು ಬೆಳೆಯುತ್ತಿರುವ ಬಿಡದಿ ಪಟ್ಟಣದಲ್ಲಿ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕಲು ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಸೇವನೆ ಅಥವಾ ಮಾರಾಟದ ಬಗ್ಗೆ ಸುಳಿವು ದೊರೆತರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು. ಡ್ರಗ್ಸ್ಮುಕ್ತ ಪಟ್ಟಣವನ್ನಾಗಿಸಲು ನಾಗರಿಕರ ಸಹಕಾರ ನಮಗೆ ತೀರಾ ಅಗತ್ಯವಾಗಿದೆ ಎಂದರು.

ಹೊಸದಾಗಿ ಬರುವ ಬಾಡಿಗೆದಾರರ ಬಗ್ಗೆ ಮನೆಯ ಮಾಲೀಕರು ಮಾಹಿತಿ ಸಂಗ್ರಹಿಸುವುದು ಕಡ್ಡಾಯವಾಗಿದೆ. ಹಾಗೆಯೇ ಬ್ಯಾಚುಲರ್ ಹುಡುಗರ ಬಗ್ಗೆಯೂ ನಿಗಾ ವಹಿಸಬೇಕಿದೆ. ತಮ್ಮ ಬಡಾವಣೆಗಳು ಅಥವಾ ಬೀದಿಯಲ್ಲಿ ಅವರ ಚಲನವಲನಗಳನ್ನು ಸ್ಥಳೀಯರು ಗಮನಿಸಿ ಪೊಲೀಸರಿಗೆ ತಿಳಿಸಬೇಕು ಎಂದು ವಿಜಯ್‌ಕುಮಾರ್ ಸಲಹೆ ನೀಡಿದರು.

ಸದಾ ವಾಹನಗಳ ಸಂಚಾರ ದಟ್ಟಣೆಯಿಂದ ಬಿಡದಿ ಪಟ್ಟಣದಲ್ಲಿ ಟ್ರಾಫಿಕ್ ಸಮಸ್ಯೆ ಅಧಿಕವಾಗಿರುತ್ತದೆ. ಹೀಗಾಗಿ ಎಲ್ಲೆಂದರಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ. ನಲ್ಲಿಗುಡ್ಡೆಕೆರೆ ರಸ್ತೆ ಹಾಗೂ ರೈಲ್ವೆ ಸ್ಟೇಷನ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಏಕರೂಪ ಅಂದರೆ ದಿನಬಿಟ್ಟು ದಿನ ಒಂದೇ ಕಡೆ ವಾಹನ ನಿಲ್ಲಿಸಬೇಕು. ಎರಡೂ ಕಡೆ ನಿಲ್ಲಿಸುವ ವಾಹನಗಳ ಮಾಲೀಕರ ವಿರುದ್ಧ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು.

ಪೊಲೀಸರು ಹಾಗೂ ಜನರ ನಡುವೆ ಸ್ನೇಹಪೂರ್ವಕ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ನಾವು ಜನಸಂಪರ್ಕ ಸಭೆಗಳನ್ನು ಆಯೋಜಿಸಿ, ಸಮಸ್ಯೆಗಳನ್ನು ಆಲಿಸುತ್ತೇವೆ ಸಾರ್ವಜನಿಕರು ನಿರ್ಭೀತಿಯಿಂದ ಪೊಲೀಸರ ಜತೆಗೆ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಬೇಕು ಎಂದು ಮನವಿ ಮಾಡಿದರು.

## ಯಡಿಯೂರಪ್ಪ ಎಂಬ ಹೆಮ್ಮರ: ಅವರ ಜನಸೇವೆ ಅಜರಾಮರ –ಅಂಬಿಕಾ ಹುಲಿನಾಯ್ಕರ್

ಸೂರ್ಯಪ್ರಗತಿನ್ಯೂಸ್.ಕಾಂ

ಕರ್ನಾಟಕ ಕಂಡ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ ಮತ್ತು ರೈತ ನಾಯಕರಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ಸುದೀರ್ಘ 50 ವರ್ಷಗಳ ರಾಜಕೀಯ ಪಯಣವು ಕೇವಲ ಚುನಾವಣಾ ಗೆಲುವಿನ ಕಥೆಯಲ್ಲ. ಇದು ಅಚಲ ಸಂಕಲ್ಪ, ಬೇರುಮಟ್ಟದಿಂದ ಬಂದ ನಾಯಕತ್ವ ಮತ್ತು ಜನಸೇವೆಗೆ ಸಂಪೂರ್ಣ ಸಮರ್ಪಿತವಾಗಿರುವ ಜೀವನದ ಪ್ರತೀಕ. ಅವರು ಸಾರ್ವಜನಿಕ ಜೀವನದ ಸುವರ್ಣ ಮಹೋತ್ಸವದಲ್ಲಿರುವ ಈ ಸಂದರ್ಭದಲ್ಲಿ, ಸವಾಲುಗಳನ್ನೆಲ್ಲ ಮೆಟ್ಟಿನಿಂತು, ಅವುಗಳನ್ನು ಅವಕಾಶಗಳಾಗಿ ಪರಿವರ್ತಿಸಿ, ಜನರ ನಿರೀಕ್ಷೆಗಳನ್ನು ಸಾಕಾರಗೊಳಿಸಿದ ಅವರ ಜೀವನಗಾಥೆಯನ್ನು ಕರ್ನಾಟಕವು ಹೆಮ್ಮೆಯಿಂದ ಸ್ಮರಿಸುತ್ತಿದೆ. ಮಂಡ್ಯ ಜಿಲ್ಲೆಯ ಬೂಕನಕೆರೆ ಗ್ರಾಮದಲ್ಲಿ ಜನಿಸಿದ ಯಡಿಯೂರಪ್ಪನವರ ಅವರ ಬಾಲ್ಯವು ಸರಳತೆ ಮತ್ತು ಮೌಲ್ಯಗಳಿಂದ ಕೂಡಿತ್ತು. 22ನೇ ವಯಸ್ಸಿನಲ್ಲಿ ಶಿಕಾರಿಪುರಕ್ಕೆ ಬಂದ ಅವರಿಗೆ ಇದೇ ನೆಲವು ರಾಜಕೀಯ ಏಳಿಗೆಗೆ ಆಧಾರಸ್ತಂಭವಾಯಿತು. ಜೀವನದುದ್ದಕ್ಕೂ ಜನರೊಂದಿಗೆ ಬಾಂಧವ್ಯ ಹೊಂದಲು ಅಡಿಪಾಯ ಹಾಕಿಕೊಟ್ಟಿತು.

1975ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಯಡಿಯೂರಪ್ಪನವರ ರಾಜಕೀಯ ಜೀವನವು ಅಧಿಕೃತವಾಗಿ ಆರಂಭವಾಯಿತು. ಅಲ್ಲಿ ಆರಂಭವಾದ ಪಯಣ ಹಂತಹಂತವಾಗಿ ಬೆಳೆದು, 1983ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದರು. ನಂತರ ನಡೆದದ್ದು ಕೇವಲ ಒಬ್ಬ ವ್ಯಕ್ತಿಯ ರಾಜಕೀಯ ಬೆಳವಣಿಗೆಯಲ್ಲ, ಕರ್ನಾಟಕದ ರಾಜಕೀಯ ಇತಿಹಾಸವನ್ನೇ ಬದಲಿಸಿದ ಮಹತ್ವದ ಅಧ್ಯಾಯ. ಯಡಿಯೂರಪ್ಪನವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷವು ಐತಿಹಾಸಿಕ ಸಾಧನೆ ಮಾಡಿ, ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ ತನ್ನ ಮೊದಲ ಸರ್ಕಾರ ರಚಿಸಿತು. ಅವರ ಜನಪರ ಕಾಳಜಿ, ಜನರೊಂದಿನ ಒಡನಾಟ ಹಾಗೂ ಸಂಘಟನಾ ಸಾಮರ್ಥ್ಯವು ಈ ಕನಸನ್ನು ಸಾಕಾರಗೊಳಿಸಿತ್ತು. ಈ ಮೂಲಕ ರಾಜ್ಯದ ರಾಜಕೀಯದಲ್ಲಿ ಹೊಸ ಶಕೆ ಆರಂಭಿಸುವುದರಲ್ಲಿ ಯಡಿಯೂರಪ್ಪನವರು ಯಶಸ್ವಿಯಾದರು.

2007 ರಿಂದ 2021ರ ವರ ನಡುವೆ ಅವರು ನಾಲ್ಕು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ, ಜನರ ಹಿತರಕ್ಷಣೆಗೆ ಅವಿರತವಾಗಿ ಶ್ರಮಿಸಿದರು. ಭಿನ್ನವಿಭಿನ್ನ ರಾಜಕೀಯ ಪರಿಸ್ಥಿತಿಗಳಿಂದಾಗಿ, ಪ್ರತಿ ಬಾರಿಯೂ ಪೂರ್ಣಾವಧಿ ಆಡಳಿತ ನಡೆಸಲು ಸಾಧ್ಯವಾಗಲಿಲ್ಲ. ಅವರ ಆಡಳಿತವು ಸದಾ ಜನಕೇಂದ್ರಿತವಾಗಿದ್ದು, ವಿಶೇಷವಾಗಿ ರೈತರು, ಗ್ರಾಮೀಣ ಜನತೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು.




2008ರಲ್ಲಿ ಅವರು ರೈತರ ಹೆಸರಿನಲ್ಲಿ ಮುಖ್ಯಮಂತ್ರಿ ಹುದ್ದೆಗೆ ಪ್ರಮಾಣವಚನ ಸ್ವೀಕರಿಸಿ, ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದರು. ರಾಜಕೀಯ ಜೀವನದ ಆರಂಭದಿಂದಲೂ ರೈತರ ಪರವಾಗಿದ್ದ ಅವರಿಗೆ ಈ ಕ್ರಮವು ವಿಶೇಷ ಕೀರ್ತಿಯನ್ನು ತಂದುಕೊಟ್ಟಿತು.

ರೈತರ ಒಂದು ಎಚ್ಪಿಯಿಂದ 10 ಎಚ್ಪಿವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಯೋಜನೆಯನ್ನು ಜಾರಿಗೆ ತಂದರು. ಇದರಿಂದಾಗಿ ರೈತರು ಸಮಾಧಾನಗೊಂಡರು ಹಾಗೂ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ದೊರೆಯಿತು. ಜೊತೆಗೆ ರೈತರ ಮತ್ತು ನೇಕಾರರ ಸಾಲವನ್ನು ಮನ್ನಾ ಮಾಡುವ ಬೃಹತ್ ಯೋಜನೆಯನ್ನು ಅನುಷ್ಠಾನಗೊಳಿಸಿ, ಆರ್ಥಿಕ ನೆಮ್ಮದಿ ಒದಗಿಸಿದರು.

ಯಡಿಯೂರಪ್ಪನವರ ಅಭಿವೃದ್ಧಿ ದೃಷ್ಟಿಕೋನವು ಕೃಷಿಗೆ ಮಾತ್ರ ಸೀಮಿತವಾಗಿರಲಿಲ್ಲ. ಪ್ರಾದೇಶಿಕ ಅಸಮತೋಲನವನ್ನು ಅರಿತು, ಉತ್ತರ ಕರ್ನಾಟಕದ ಏಳು ಹಿಂದುಳಿದ ಜಿಲ್ಲೆಗಳನ್ನು "ಕಲ್ಯಾಣ ಕರ್ನಾಟಕ" ಎಂದು ಘೋಷಿಸುವುದರಲ್ಲಿ ಅವರು ಮಹತ್ವದ ಪಾತ್ರ ವಹಿಸಿದರು. ಇದರ ಫಲವಾಗಿ, ಸಾವಿರಾರು ಕೋಟಿ ರೂಪಾಯಿ ಅನುದಾನ ದೊರೆತು, ಉತ್ತರ ಕರ್ನಾಟಕದಲ್ಲೂ ಅಭಿವೃದ್ಧಿಯ ಶಕೆ ಆರಂಭವಾಯಿತು. **ಕ್ರಾಂತಿಕಾರಿ ಭಾಗ್ಯಲಕ್ಷ್ಮೀ ಯೋಜನೆ** ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹೆಣ್ಣುಮಕ್ಕಳಿಗಾಗಿ ಜನನದ ಸಮಯದಲ್ಲೇ ಠೇವಣಿ ಇಟ್ಟು, 18 ವರ್ಷ ತುಂಬಿದಾಗ ಅವರಿಗೆ ಆರ್ಥಿಕ ನೆರವು ದೊರೆಯುವಂತ ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದರು. ಜೊತೆಗೆ, ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ, ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 50 ಮಹಿಳಾ ಮೀಸಲಾತಿ, ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ ಒದಗಿಸುವ ಸಂಧ್ಯಾ ಸುರಕ್ಷಾ ಯೋಜನೆ ಮತ್ತಿತರ ಹತ್ತು ಹಲವು ಮಹತ್ವಾಕಾಂಕ್ಷೆಯ ಯೋಜನೆಗಳ ರೂವಾರಿಯಾದರು. ಸಾಮಾಜಿಕ ಬದ್ಧತೆಗೆ ಕೂಡ ಯಡಿಯೂರಪ್ಪನವರು ಹೆಸರುವಾಸಿಯಾಗಿದ್ದಾರೆ. ಲಾಟರಿಯನ್ನು ನಿಷೇಧಿಸುವ ಮೂಲಕ ಗ್ರಾಮೀಣ ಕುಟುಂಬಗಳನ್ನು ಆರ್ಥಿಕ ಸಂಕಷ್ಟದಿಂದ ರಕ್ಷಿಸಿದ್ದರಲ್ಲೂ ಯಡಿಯೂರಪ್ಪನವರ ಪಾತ್ರ ಮಹತ್ವದ್ದಾಗಿದೆ.

2020ರಲ್ಲಿ ಕೋವಿಡ್–19 ಮಹಾಮಾರಿಯ ಸಂಕಷ್ಟದ ಸಂದರ್ಭದಲ್ಲೂ ಯಡಿಯೂರಪ್ಪನವರ ನಾಯಕತ್ವವು ರಾಜ್ಯಕ್ಕೆ ನೆರವಾಯಿತು. ಸಾರ್ವಜನಿಕ ಆರೋಗ್ಯ ಮತ್ತು ಆರ್ಥಿಕ ಸ್ಥಿರತೆಯ ನಡುವಿನ ಸಮತೋಲನ ಕಾಪಾಡುವ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿ, ಸಂಕಷ್ಟವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರು. ಈ ಮೂಲಕ ತೀವ್ರ ಸಂಕಷ್ಟದ ಸಂದರ್ಭದಲ್ಲೂ ಜನರು ಆಡಳಿತ ಮೇಲೆ ವಿಶ್ವಾಸ ಹೊಂದಿರುವಂತೆ ಮಾಡಿದರು.

ಸಾರ್ವಜನಿಕ ಜೀವನದಲ್ಲಿ ಐದು ಸಾರ್ಥಕ ದಶಕಗಳನ್ನು ಪೂರ್ಣಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಅವರ ಅನುಭವಿ ಪಯಣವು ನನ್ನಂತಹ ಅನೇಕರಿಗೆ ಎಂದೆಂದಿಗೂ ಪ್ರೇರಣೆಯಾಗಿದೆ. ಮಂಡ್ಯದ ಸಣ್ಣ ಹಳ್ಳಿಯಿಂದ ಆರಂಭವಾಗಿ, ಕರ್ನಾಟಕದ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿ, ರೈತರು, ಮಹಿಳೆಯರು, ಯುವಜನತೆ ಮತ್ತು ಬಡವರಿಗಾಗಿ ಶ್ರಮಿಸಿದ ಅವರ ಜೀವನವು ಸ್ಫೂರ್ತಿಯ ಚಿಲುಮೆಯಾಗಿವೆ.

ಯಡಿಯೂರಪ್ಪನವರ ನೀತಿ–ನಿರ್ಧಾರಗಳು ರಾಜ್ಯದ ಕೃಷಿ, ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ ಮತ್ತು ಪ್ರಾದೇಶಿಕ ಸಮಾನತೆಗೆ ಸುಭದ್ರ ಅಡಿಪಾಯ ಹಾಕಿಕೊಟ್ಟಿದೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂಬ ಬಿಜೆಪಿಯ ಬದ್ಧತೆಗೆ ಯಡಿಯೂರಪ್ಪನವರು ನಡೆದು ಬಂದ ಹಾದಿಯೇ ಸ್ಫೂರ್ತಿಯಾಗಿದೆ.

ಬಿ.ಎಸ್.ಯಡಿಯೂರಪ್ಪನವರು ಕೇವಲ ರಾಜಕಾರಣಿಯಲ್ಲ, ಅವರು ಕರ್ನಾಟಕದ ರಾಜಕೀಯದ ಹೆಮ್ಮರವಾಗಿದ್ದಾರೆ. ಅವರ ನೆರಳಿನಲ್ಲಿ ಪಕ್ಷ ವಿಶಾಲವಾಗಿ ಮತ್ತು ವಿಸ್ತಾರವಾಗಿ ಬೆಳೆಯಲಿ ಎಂದು ಈ ಶುಭ ಸಂದರ್ಭದಲ್ಲಿ ಹಾರೈಸುತ್ತೇನೆ.

ಲೇಖಕರು :
ಶ್ರೀಮತಿ. ಅಂಬಿಕಾ ಎಂ ಹುಲಿನಾಯ್ಕರ್
ಕರ್ನಾಟಕ ಬಿಜೆಪಿ ರಾಜ್ಯ ಕಾರ್ಯದರ್ಶಿಗಳು



## ಸಣ್ ಸುದ್ದಿ



ತುಮಕೂರು ಮಂಜುನಾಥ್ ನಗರದ 80 ಜಿಣ ರಸ್ತೆಯಲ್ಲಿರುವ ಎಸ್ ವಿ ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೇ.6 ರಂದು ಉದ್ಯೋಗ ಮೇಳವನ್ನು ಏರ್ಪಡಿಸಲಾಗಿತ್ತು, ಉದ್ಯೋಗ ಮೇಳದಲ್ಲಿ ಸುಮಾರು 50 ಕ್ಕೂ ಹೆಚ್ಚುಅಂತಿಮ ವರ್ಷದ ಃ. ಅಂಟ ಮತ್ತು ಃ. ಅ. ಂ ವಿದ್ಯಾರ್ಥಿಗಳು ಆಯ್ಕೆಯಾದರು . ಂಂಠಿಟಜ, ಈಂಥಭಿಂಟಟಿ ಮತ್ತು ಖಃಖ ಸೇರಿದಂತೆ ಅನೇಕ ಕಂಪನಿಗಳು ಭಾಗವಹಿಸಿದ್ದವು. ಈ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂಪ್ರಾಂಶುಪಾಲರು ಶುಭ ಕೋರಿದರು.

## ಮೇ 10ರಂದು ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ನಗರ ಉಪವಿಭಾಗ–1ರಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿ ಕೈಗೊಂಡಿರುವುದರಿಂದ ಮೇ 10ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ರಂಗಾಪುರ, ಲಿಂಗಾಪುರ, ಬಾಲಾಜಿ ಲೇಔಟ್, ಅಣ್ಣೇನಹಳ್ಳಿ, ತಿಮ್ಮಲಾಪುರ, ನರಸಾಪುರ, ಮಲ್ಲೇನಹಳ್ಳಿಯಲ್ಲಿ ಮಧ್ಯಂತರ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಾಗರಾಜು ಹೆಚ್.ಪಿ. ಮನವಿ ಮಾಡಿದ್ದಾರೆ.

## ಐಟಿಐ ದಾಖಲಾತಿಗಾಗಿ ಅರ್ಜಿ ಆಹ್ವಾನ

ತುಮಕೂರು: ತುರುವೇಕೆರೆ ವೈ.ಟಿ.ರಸ್ತೆಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2026–27ನೇ ಸಾಲಿನ ಐಟಿಐ ದಾಖಲಾತಿಗಾಗಿ ಆನ್‍ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಎಸ್.ಎಸ್.ಎಲ್.ಸಿ. ಉತ್ತೀರ್ಣ, ಪಿಯುಸಿ ಉತ್ತೀರ್ಣ/ಅನುತ್ತೀರ್ಣ ಅಭ್ಯರ್ಥಿಗಳು ಫಿಟ್ಟರ್, ಎಲೆಕ್ಟ್ರೀಷಿಯನ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಕೋಪಾ, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್, ಅಡ್ವಾನ್ಸ್ ಸಿಎನ್‍ಸಿ ಮೆಷಿನಿಂಗ್‍ಗಾಗಿ ವೆಬ್‍ಸೈಟ್ ವಿಳಾಸ www.cite.karnataka.gov.in ಮೂಲಕ ಮೇ 8ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9743539690/ 8884069548/ 9482929710/ 9449926855/ 9980129515ನ್ನು ಸಂಪರ್ಕಿಸಬೇಕೆಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

## ಹಕ್ಕಿಪಿಕ್ಕಿ, ಹಂದಿಜೋಗಿಜನಾಂಗ ವಸತಿ ಜಾಗ ಮಂಜೂರು



ತುಮಕೂರು: ತುಮಕೂರುಗ್ರಾಮಾಂತರ ವಿಧಾನಸಭಾಕ್ಷೇತ್ರದಅರಕೆರೆಗ್ರಾಮ ಪಂಚಾಯತಿ ವ್ಯಾಪ್ತಿಯಅರಕೆರೆಗ್ರಾಮದ ಹಕ್ಕಿಪಿಕ್ಕಿ ಮತ್ತು ಹಂದಿಜೋಗಜನಾಂಗದಜನರಿಗೆ ನಿವೇಶನ ಕೊಟ್ಟು ಮನೆ ಕಟ್ಟಿಸಿಕೊಡುವ ಸಂಬಂಧ ಶಾಸಕ ಬಿ. ಸುರೇಶ್‍ಗೌಡರು ಸ್ಥಳ ಪರಿಶೀಲನೆ ಮಾಡಿದರು.

ಶಾಸಕರಒತ್ತಾಯದ ಮೇರೆಗೆ ಸರ್ಕಾರ ಹಕ್ಕಿಪಿಕ್ಕಿ ಹಾಗೂ ಹಂದಿಜೋಗಿಜನಾಂಗದವರಿಗೆತಲಾ1.5 ಎಕರೆಜಾಗ ಮಂಜೂರು ಮಾಡಿದ್ದುಜಾಗ ಪರಿಶೀಲನೆ ಮಾಡಿದರು.ಈ ವಿಚಾರವನ್ನು ಸುರೇಶ್‍ಗೌಡರು ವಿಧಾನಸಭೆಯಲ್ಲಿಯೂ ಪ್ರಸ್ತಾಪ ಮಾಡಿ ಈ ಬಡವರಿಗೆ ಮನೆ ಕಟ್ಟಿಸಿ ಕೊಡಬೇಕಾದಅಗತ್ಯವನ್ನು ಪ್ರತಿಪಾದಿಸಿದ್ದರು. ಜಾಗ ಪರಿಶೀಲನೆ ವೇಳೆ ಶಾಸಕ ಸುರೇಶ್‍ಗೌಡರಜೊತೆ ತಹಶಿಲ್ದಾರ್‍ರಾಜೇಶ್ವರಿ, ತಾಲ್ಲೂಕು ಪಂಚಾಯತಿಕಾರ್ಯ ನಿರ್ವಾಹಕಅಧಿಕಾರಿ ಲಕ್ಷ್ಮೀನಾರಾಯಣ, ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳು ಇದ್ದರು. ಈ ಗ್ರಾಮದ ಕೆಲವರುರೈತರಿಗೆ ಪಡಿತರಚೀಟಿ ಇಲ್ಲದೇಇರುವ ವಿಚಾರ ಗಮನಕ್ಕೆ ಬಂದುತಕ್ಷಣಅವರಿಗೆ ಪಡಿತರಚೀಟಿಕೊಡಬೇಕುಎಂದುಶಾಸಕರು ಅಧಿಕಾರಿಗಳಿಗೆ ಆದೇಶ ಮಾಡಿದರು.

## "ಅಕ್ಷರ ದಾಸೋಹ ಶಿವಶಂಕರ್ ನಿಧನ



ತಿಪಟೂರು: ಶಿಕ್ಷಣ ಇಲಾಖೆ ತಾಲ್ಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಿವಶಂಕರ್ ಡಿ.ಎಸ್. (55) ಹೃದಯಘಾತದಿಂದ ನಿಧನರಾದರು.ಶ್ರೀಯುತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.ತಾಲ್ಲೂಕಿನಲ್ಲಿ ಶಿವಶಂಕರ್ ರವರು ಅಕ್ಷರ ದಾಸೋಹ ಸಹಾಂಯಕ ನಿರ್ದೇಶಕರಾಗಿ ಉತ್ತಮ ಸೇವೆ ಸಲ್ಲಿಸಿ ಜನಾನುರಾಗಿಂಯಾಗಿದ್ದರು.ಶ್ರೀಯುತರ ನಿಧನಕ್ಕೆ ಶಾಸಕ ಕೆ. ಷಡಕ್ಷರಿ, ತಾಲ್ಲೂಕು ಪಂಚಾಯಿತಿ ಇಒ ಸುದರ್ಶನ್, ಶಿಕ್ಷಣಾಧಿಕಾರಿ ತಾರಾಮಣಿ ಸೇರಿದಂತೆ ತಾಲ್ಲೂಕಿನ ಶಿಕ್ಷಕರು, ಕಚೇರಿಯ ಸಿಬ್ಬಂದಿ ವರ್ಗ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಇವರ ಅಂತ್ಯ ಸಂಸ್ಕಾರ ಸ್ವಂತ ಗ್ರಾಮವಾದ ಚಿ.ನಾ. ಹಳ್ಳಿ ತಾಲ್ಲೂಕು ದುಗುಡಿಹಳ್ಳಿಯಲ್ಲಿ ನೆನ್ನೆ ಮಧ್ಯಾಹ್ನ ನೆರವೇರಿತು"

## ಸಾಮಾಜಿಕ ಕಳಕಳಿಯಿಂದ ವಿದ್ಯಾರ್ಥಿಗಳಿಗಾಗಿ ಸ್ಕಾಲರ್‍ಶಿಪ್ ಯೋಜನೆ: ಮೇ.10 ಸ್ಕಾಲರ್‍ಶಿಪ್ ಟೆಸ್ಟ್

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಬಡತನ ಉನ್ನತ ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂಬ ಸದುದ್ದೇಶ, ಸಾಮಾಜಿಕ ಕಳಕಳಿಯಿಂದ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ ಸ್ಕಾಲರ್‍ಶಿಪ್ ಯೋಜನೆಯನ್ನು ಇಂಜಿನೀಯರಿಂಗ್ ವಿದ್ಯಾರ್ಥಿಗಳಿಗಾಗಿ ಕಳೆದ ಹತ್ತು ವರ್ಷಗಳಿಂದ ಜಾರಿಗೊಳಿಸುತ್ತಿದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್.ಹುಲಿನಾಯ್ಕರ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡ, ಪ್ರತಿಭಾನ್ವಿತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಂಸ್ಥೆ ವಾರ್ಷಿಕ 2 ಕೋಟಿ ರೂಪಾಯಿಗಳನ್ನು ವಿನಿಯೋಗಿಸುತ್ತಿದೆ. ಇದೇ 10ರಂದು ಕಾಲೇಜಿನ ಆವರಣದಲ್ಲಿ ಸ್ಕಾಲರ್‍ಶಿಪ್ ಟೆಸ್ಟ್ ನಡೆಯಲಿದ್ದು ಇದರಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಮೊದಲ 11 ವಿದ್ಯಾರ್ಥಿಗಳಿಗೆ ನಾಲ್ಕು ವರ್ಷ ಉಚಿತ ಶಿಕ್ಷಣ ನೀಡಲಾಗುತ್ತದೆ ಸಿಇಟಿ ಮಾದರಿಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ ಎಂದು ಅವರು ಹೇಳಿದರು.

11 ರಿಂದ 30ನೇ ರ?ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸಿಇಟಿ ಶುಲ್ಕ ಮಾತ್ರ ತೆಗೆದುಕೊಳ್ಳಲಾಗುತ್ತದೆ. 31 ರಿಂದ 60ನೇ ರ?ಯಾಂಕ್ ಪಡೆದ ಪಡೆದ ವಿದ್ಯಾರ್ಥಿಗಳಿಗೆ ಶೇಕಡ 25 ರಷ್ಟು ಸ್ಕಾಲರ್‍ಶಿಪ್ ಮತ್ತು ಟ್ಯೂಷನ್ ಶುಲ್ಕವನ್ನು ಮನ್ನ ಮಾಡಲಾಗುವುದು. 61 ರಿಂದ 100ನೇ ರ?ಯಾಂಕ್ ಪಡೆದ ವಿದ್ಯಾರ್ತಿಗಳಿಗೆ ಶೇಕಡ 10ರಷ್ಟು ಸ್ಕಾಲರ್‍ಶಿಪ್ ಮತ್ತು ಟ್ಯೂಷನ್ ಶುಲ್ಕವನ್ನು ಮನ್ನಮಾಡಲಾಗುವುದು. 101 ಮತ್ತು ಅದಕ್ಕಿಂತ ಹೆಚ್ಚಿನ ರ?ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ 10 ಸಾವಿರ ರೂಪಾಯಿ ಲ್ಯಾಬ್ ಶುಲ್ಕ ಮನ್ನಾ ಮಾಡಲಾಗುತ್ತದೆ ಹೀಗೆ ಪರೀಕ್ಷೆ ಬರೆದ ಎಲ್ಲ ವಿದ್ಯಾರ್ಥಿಗಳಿಗೂ ಒಂದಲ್ಲ ಒಂದು ರೀತಿ ಆರ್ಥಿಕ ಪ್ರಯೋಜನವಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಂಡು ಮುಂದೆ ಬಂದಿದ್ದಾರೆ. ಬದುಕುಕಟ್ಟಿಕೊಂಡಿದ್ದಾರೆ. ಸ್ಕಾಲರ್‍ಶಿಪ್ ಟೆಸ್ಟಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯ ಮತ್ತು ಊಟ–ತಿಂಡಿ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಯವರೆಗೆ 1,300ಕ್ಕೂ ಹೆಚ್ಚು ಜನ ನೊಂದಣಿ ಮಾಡಿಕೊಂಡಿದ್ದು ಶನಿವಾರದ ವೇಳೆಗೆ ಈ ಸಂಖ್ಯೆ 2,000 ಗಡಿ ದಾಟುವ ನಿರೀಕ್ಷೆ ಇದೆ ಎಂದು ಹೇಳಿದರು.

ಗುರುಕುಲ ಮತ್ತು ಮಹಾರಾಜರ ಕಾಲದಿಂದಲೂ ಈ ಪದ್ಧತಿ ನಿರಂತರವಾಗಿ ನಡೆದುಕೊಂಡು ಬರುತ್ತಿದ್ದು ಅದನ್ನು ನಮ್ಮ ಸಂಸ್ಥೆ ಮುಂದುವರಿಸಿಕೊಂಡು ಅಳಿಲು ಸೇವೆ ಮಾಡುತ್ತಿದೆ. ಇದರ ಜೊತೆಗೆ ಜಗತ್ತಿನ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಸ್ಕಾಲರ್‍ಶಿಪ್ ಯೋಜನೆಂಯನ್ನು ಜಾರಿಗೊಳಿಸುತ್ತಿದ್ದು ಇದಕ್ಕೆ ಸುಮಾರು 200ವರ್ಷಗಳ ಇತಿಹಾಸವಿದೆ. ಅಮೆರಿಕಾದ ಸ್ಟಾ ?ಯನ್ ಪೋರ್ಡ್ ವಿಶ್ವವಿದ್ಯಾಲಯದ ಶಿಷ್ಯ ವೇತನದಿಂದ ಕರ್ನಾಟಕದ ಪ್ರಸಿದ್ಧ ರಾಜಕಾರಣಿ ಎಸ್.ಎಂ. ಕೃಷ್ಣ ಹಾಗೂ ಅರುಣ್‍ಜೈಟ್ಲಿ, ಡಾ. ಸುಬ್ರಮಣ್ಯ ಸ್ವಾಮಿ ಉನ್ನತ ವ್ಯಾಸಂಗ ಮಾಡಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಅದೇ ರೀತಿ ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಸಂಸ್ಥೆಯ ಸ್ಕಾಲರ್‍ಶಿಪ್ ಪ್ರಯೋಜನ ಪಡೆದ ಅನೇಕ ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳು ದೇಶ ಮತ್ತು ಹೊರದೇಶಗಳ ಪ್ರತಿಷ್ಠಿತ ಕಂಪನಿಗಳಲ್ಲಿ ಹುದ್ದೆ ಪಡೆದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಕಾಲೇಜಿನಿಂದ ಹೊರಬರುವ ವಿದ್ಯಾರ್ಥಿಗಳಿಗೆ ಒಳ್ಳೆಯ ಉದ್ಯೋಗ ದೊರಕುತ್ತಿದೆ ಪ್ರಮುಖ ಕಂಪನಿಗಳಲ್ಲಿ ವಾರ್ಷಿಕ 5 ರಿಂದ 15 ಲಕ್ಷದವರೆಗೆ ವೇತನ ಸಿಗುತ್ತಿದೆ. ಇದರ ಫಲವಾಗಿ ಪ್ರತಿ ವರ್ಷ ವಿದ್ಯಾರ್ಥಿಗಳ ಪ್ರವೇಶ ಹೆಚ್ಚಾಗುತ್ತಿದೆ. ಅದೇ ರೀತಿ ಕಾಲೇಜಿನಲ್ಲಿ ವಿಶ್ವ ದರ್ಜೆಯ ಮೂಲ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಇನ್ನೂ ಪ್ರತಿ ಸೆಮಿಸ್ಟರ್‍ನಲ್ಲಿ 9ಅಂಕ (ಅತಿ ಹೆಚ್ಚು ಅಂಕ) ತೆಗೆಯುವ ವಿದ್ಯಾರ್ಥಿಗಳಿಗೆ 6,000 ಪ್ರೋತ್ಸಾಹ ಧನ ನೀಡಲಾಗುತ್ತಿದ್ದು ಪ್ರಸಕ್ತ ವರ್ಷ 400 ವಿದ್ಯಾರ್ಥಿಗಳು ಇದರ ಪ್ರಂಯೋಜನ ಪಡೆಯಲಿದ್ದಾರೆ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್.ಪಾಟೀಲ್, ಕಾಲೇಜಿನ ಉಪಪ್ರಾಂಶುಪಾಲ ಡಾ.ಚಂದ್ರಶೇಖರ್, ಎಂ.ಬಿ.ಎ. ವಿಭಾಗದ ಮುಖ್ಯಸ್ಥ ರಾಮಕೃಷ್ಣ ಹಾಜರಿದ್ದರು.

## ಎಸ್‍ಎಸ್‍ಐಟಿಯಲ್ಲಿ ಇಂದು ಮತ್ತು ನಾಳೆ ಟೆಕ್ನೋಡಿಯಾ–2026

ತುಮಕೂರು : ನಗರದ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಂಯರಿಂಗ್ ವಿಭಾಗದ ವತಿಯಿಂದ ಕ್ಯಾಂಪಸ್‍ನಲ್ಲಿ ಇದೇ ಮೇ8 ಮತ್ತು 9 ರಂದು ಅಂತಾರಾಷ್ಟ್ರೀಯ ಮಟ್ಟದ ತಾಂತ್ರಿಕ ಮಾದರಿ ಪ್ರದರ್ಶನ ಟೆಕ್ನೋಡಿಯಾ–2026 ಹಾಗೂ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗಹಿಸುತ್ತಿದ್ದಾರೆ. ಸ್ಪರ್ಧೆವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುತ್ತಿದೆ.

ಈ ಸ್ಪರ್ಧೆಯು ಎಂಜಿನಿಯರಿಂಗ್ ಪದವಿ (ಬಿ–ಟೆಕ್), ಸ್ನಾತಕೋತ್ತರ ಪದವಿ (ಎಂ–ಟೆಕ್) ಹಾಗೂ ಎಸಿಎ ವಿದ್ಯಾರ್ಥಿಗಳಿಗಾಗಿ 3 ವಿಭಾಗಗಳಲ್ಲಿ ನಡೆಯಲಿದೆ. ಎಥೋಪಿಯ ದೇಶ ಹಾಗೂ ಕೇರಳ, ತಮಿಳನಾಡು, ಆಂದ್ರಪ್ರದೇಶ ರಾಜ್ಯಗಳು ಸೇರಿದಂತೆ ಅನೇಕ ಎಂಜಿನಿಯರಿಂಗ್ ಕಾಲೇಜಿನಿಂದ ಸುಮಾರು 250ಕ್ಕೂ ಹೆಚ್ಚು ತಾಂತ್ರಿಕ ಪ್ರಾಜೆಕ್ಟ್ ಮಾದರಿಗಳೊಂದಿಗೆ ವಿದ್ಯಾರ್ಥಿಗಳು ಸ್ಪರ್ಧೆಂಯಲ್ಲಿ ಭಾಗಹಿಸುತ್ತಿದ್ದಾರೆ 2 ದಿನಗಳ ಈ ಕಾರ್ಯಕ್ರಮದಲ್ಲಿ ಪ್ರಾಜೆಕ್ಟ್ ಪ್ರದರ್ಶನದ ಜೊತೆಗೆ ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ಪಿಯುಸಿ ವಿದ್ಯಾರ್ಥಿಗಳಿಗಾಗಿ ಕಾಲೇಜು ಕುರಿತು ಪಠ್ಯ ಮತ್ತು ಪಠ್ಯೇತರ ಚಟುವಟಿಕೆ ಕುರಿತು ಮಾಹಿತಿ ನೀಡಲಾಗುತ್ತದೆ ಎಂದು ಟೆಕ್ನೋಡಿಯಾ–2023 ರ ಅಧ್ಯಕ್ಷರಾದ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ ಎಂ.ಎಂ.ನಡಕಟ್ಟಿ ತಿಳಿಸಿದ್ದಾರೆ .

## ರವೀಂದ್ರ ನಾಥ ಠಾಗೋರ್ ಅವರ ಬಹುಮುಖ ಪ್ರತಿಭೆ ಅದ್ಬುತ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ:– ಗೀತಾಂಜಲಿ ಕೃತಿಗೆ ನೋಬೆಲ್ ಪ್ರಶಸ್ತಿ ಪಡೆದು ಪುರಸ್ಕೃತರಾದ ರವೀಂದ್ರನಾಥ ಠಾಗೋರ್ ಅವರ ಬಹುಮುಖ ಪ್ರತಿಭೆ ಅದ್ಬುತ! , ಎಲ್ಲರಿಗೂ ಶಿಕ್ಷಣ ದೊರಕಬೇಕೆಂಬ ಹಿರಿಯಾಸೆಯಿಂದ ಶಾಂತಿ ನಿಕೇತನ ಸ್ಥಾಪಿಸಿ, ಶಿಸ್ತು ಸಂಯಮ, ಸೌಹಾರ್ದ ,ಸೋದರತಾ ಭಾವದಿಂದ ಉನ್ನತಶಿಕ್ಷಣ ನೀಡಿದರು. ಅವರು ರಚಿಸಿದ 'ಜನ ಗಣಮನ' ಭಾರತದ ರಾಷ್ಟ್ರಗೀತೆಯಾಗಿ ಮನ್ನಣೆ ಪಡೆಯಿತು ,ಅವರ ಸಾಹಿತ್ಯ, ನಾಟಕ, ಕಾದಂಬರಿ, ಸಣ್ಣಕತೆಗಳು, ಪ್ರಬಂಧಗಳು ಇತರ ಭಾಷೆಗಳಿಗೆ ರೂಪಾಂತರಗೊಂಡು ಜನಪ್ರಿಯತೆ ಗಳಿಸಿದವು ಎಂದು ಹಿರಿಯ ಸಾಹಿತಿ ಪ್ರೊ.ಮ.ಲ.ನ . ಮೂರ್ತಿ ಅಭಿವ್ಯಕ್ತಪಡಿಸಿದರು. ಪಟ್ಟಣದ ಸಹೃದಯ ಬಳಗ, ಟಿ.ವಿ.ವಿ.ಬಿ.ಎದ್ ಕಾಲೇಜಿನಲ್ಲಿ ಆಯೋಜಿಸಿದ್ದ ರವೀಂದ್ರನಾಥ್ ಟ್ಯಾಗೋರ್ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಭಾರತೀಯರ ಜನಮಾನಸದಲ್ಲಿ ಸ್ಥಿರವಾಗಿ ಉಳಿದಿರುತ್ತಾರೆ ಎಂದರು.

ಗ್ರಂಥಪಾಲಕ ಜಿ.ಎಸ್. ನಾಗಭೂಷಣ ಮಾತನಾಡಿ ರವೀಂದ್ರನಾಥ್ ಠ್ಯಾಗೋರರ ಗೀತಾಂಜಲಿಯಲ್ಲಿರುವ ಕತ9ವ್ಯನಿಷ್ಠೆ, ಆಧ್ಯಾತ್ಮಿಕ ನಿಲುವು, ದೇಶಭಕ್ತಿ, ಒಳ್ಳೆಯ ಜೀವನ ನಡೆಸುವ ಸೂತ್ರಗಳನ್ನು ತಿಳಿಸಿದರು.

ದೈಹಿಕ ಶಿಕ್ಷಣ ನಿದೇ9ಶಕ ಎ.ಆರ್. ವೆಂಕಟೇಶ ಮೂರ್ತಿ ಮಾತನಾಡಿ ಉತ್ತಮ ಚಿಂತನೆ ಶ್ರೇಷ್ಠವಾದ ಬದುಕು ನಡೆಸಲು ಪ್ರೇರಣೆ ನೀಡುತ್ತದೆ ಎಂದರು.

ಪ್ರಶಿಕ್ಷಣಾರ್ಥಿಗಳಾದ ಸಹನಾ, ಎಂ.ಎಸ್, ಸವಿತಾ ಸದಾಶಿವ,ಬಸಮ್ಮ ,ಹಾಗೂ ಪ್ರತಿಭಾ ರವರು ಗೀತಾಂಜಲಿ ಕೃತಿಯ ಬಗ್ಗೆ ಸಂವಾದ ನಡೆಸಿದರು, ಕಾರ್ಯಕ್ರಮದಲ್ಲಿ ಬಳಗದ ಸದಸ್ಯರಾದ ವೆಂಕಟೇಶ್ ಸ್ವಾಗತಿಸಿ, ಕವಿತಾಬಾಯಿ ನಿರೂಪಿಸಿ,ಕುಮಾರ್ ವಂದಿಸಿದರು.

## ಪ್ರತಿಷ್ಠಿತ ಶಾಲಾ ದಾಖಲಾತಿ;

### ಅರ್ಹತಾ ಪರೀಕ್ಷಾ ಕೇಂದ್ರದ ಸ್ಥಳ, ಸಮಯ ಬದಲಾವಣೆ

ತುಮಕೂರು: ಸಮಾಜ ಕಲ್ಯಾಣ ಇಲಾಖೆಯಡಿ 2026–27ನೇ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು 6ನೇ ತರಗತಿಗೆ ಪ್ರವೇಶ ಕಲ್ಪಿಸಲು ಆನ್‍ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದ್ದು, ಮೇ 12ರಂದು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ(ಡಯಟ್), ತುಮಕೂರು ಇಲ್ಲಿ ಏರ್ಪಡಿಸಲಾಗಿದ್ದ ಅರ್ಹತಾ ಪರೀಕ್ಷೆಯನ್ನು ಎಂಪ್ರೆಸ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆ,(ಕೆಪಿಎಸ್) ಅಶೋಕ ರಸ್ತೆ, ತುಮಕೂರು (ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ) ಇಲ್ಲಿ ನಡೆಸಲಾಗುವುದು.

ಮೇ 12ರಂದು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ, (ಡಯಟ್) ತುಮಕೂರು ಇಲ್ಲಿ ಪ್ರಥಮ ಡಿ.ಎಲ್.ಇಡಿ ಪೂರಕ ಪರೀಕ್ಷೆಗಳು ನಡೆಯುತ್ತಿರುವುದರಿಂದ ಸ್ಥಳಾವಕಾಶದ ಕೊರತೆಯುಂಟಾಗುತ್ತದೆ. ಆದ್ದರಿಂದ ಪರೀಕ್ಷಾ ಸ್ಥಳವನ್ನು ಎಂಪ್ರೆಸ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆ,(ಕೆಪಿಎಸ್) ಅಶೋಕ ರಸ್ತೆ, ತುಮಕೂರು (ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ) ಇಲ್ಲಿ ಮೇ 12ರಂದು ಬೆಳಿಗ್ಗೆ 11 ರಿಂದ 1.30 ಗಂಟೆಯವರೆಗೆ ನಡೆಸಲು ತಿರ್ಮಾನಿಸಲಾಗಿದೆ.

ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು/ಪೋಷಕರು ಮೇ 12ರಂದು ಎಂಪ್ರೆಸ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆ,(ಕೆಪಿಎಸ್) ಅಶೋಕ ರಸ್ತೆ, ತುಮಕೂರು ಇಲ್ಲಿ ನಡೆಯುವ ಅರ್ಹತಾ ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಬರೆಯುವಂತೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಜಾತಿ ಪತ್ರ ವಿಳಂಬವಾಗದಂತೆ ಕ್ರಮವಹಿಸಲು ಸಲಹೆ




ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ಜಾತಿ ಪ್ರಮಾಣ ಪತ್ರ ಇಲ್ಲದೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದಕಾರಣ ಜಾತಿ ಪತ್ರಗಳನ್ನು ತ್ವರಿತವಾಗಿ ವಿತರಣೆ ಮಾಡುವಂತೆ ಕರ್ನಾಟಕ ರಾಜ್ಯ ಕಾಡುಗೊಲ್ಲರ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಹೇಶ್ ಹಾರೋಗೆರೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ತುಮಕೂರು ಜಿಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಜಿಲ್ಲಾ ಮಟ್ಟದ ಕಂದಾಯ ಅಧಿಕಾರಿಗಳಿಗೆ ನಡೆಸಿದ ಸಭೆಂಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಕಾಡುಗೊಲ್ಲ ಸಮುದಾಯ ಅತ್ಯಂತ ಹಿಂದುಳಿದ ಒಂದು ಬುಡಕಟ್ಟು ಸಮುದಾಯವಾಗಿದ್ದು ಈ ಜನರಿಗೆ ಸರ್ಕಾರದ ಸವಲತ್ತುಗಳು ಸರಿಯಾದ ರೀತಿಯಲ್ಲಿ ತಲುಪುತ್ತಿಲ್ಲ. ಅವರಿಗೆ ಅಷ್ಟು ಜಾನವಿಲ್ಲ. ಸರ್ಕಾರ ಇದನ್ನು ಅರಿತು ಕಾಡುಗೊಲ್ಲ ಸಮುದಾಯಕ್ಕೆಂದೇ ಪ್ರತ್ಯೇಕ ನಿಗಮ ಮಾಡಿದೆ. ಈ ನಿಗಮದ ಮೂಲಕ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ. ಆದರೆ ಈ ಜನಕ್ಕೆ ಅಭಿವೃದ್ಧಿ ನಿಗಮದಿಂದ ಸಿಗುವ ಯೋಜನೆಗಳನ್ನು ತಲುಪಿಸಲು ಜಾತಿ ಪ್ರಮಾಣ ಪತ್ರ ಮುಖ್ಯವಾಗಿದ್ದು ಇದು ಇಲ್ಲದೆ ಎಷ್ಟೋ ಜನ ಅರ್ಜಿ ಹಾಕಲು ಸಾಧ್ಯವಾಗುತ್ತಿಲ್ಲ. ಆದ ಕಾರಣ ತಾಲ್ಲೂಕು ಮಟ್ಟದ ಕಂದಾಯ ಅಧಿಕಾರಿಗಳು, ತಹಸೀಲ್ದಾರ್ ಅವರುಗಳು ಗಮನಹರಿಸಿ ಶಿಘ್ರ ಜಾತಿ ಪತ್ರ ವಿತರಣೆ ಮಾಡುವಂತೆ ತಿಳಿಸಿದರು.

ರಾಜ್ಯದ ತುಮಕೂರು ಹಾಗೂ ಚಿತ್ರದುರ್ಗದಲ್ಲಿ ಈ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರಿಗೆ ಸರಿಯಾದ ಮಾಹಿತಿ ಇಲ್ಲದೆ ಇರುವುದರಿಂದ ಹಾಗೂ ಜಾತಿ ಪ್ರಮಾಣ ಪತ್ರ ಬೇಗನೇ ಸಿಗುತ್ತಿಲ್ಲವಾದ ಕಾರಣ ವಿವಿಧ ಯೋಜನೆಗಳಿಗೆ ಅರ್ಜಿ ಹಾಕುತ್ತಿಲ್ಲ. ಅಧಿಕಾರಿಗಳು ಇದನ್ನು ಗಮನಿಸಬೇಕು. ಸರ್ಕಾರವೂ ಸಹ ಈಗಾಗಲೇ ಸುತ್ತೋಲೆ ಹೊರಡಿಸಿದೆ. ಇದಕ್ಕೆ ತಹಸಿಲ್ದಾರ್ ರವರು ಹೆಚ್ಚು ಒತ್ತು ನೀಡಬೇಕು ಎಂದರು. ಗಂಗಾಕಲ್ಯಾಣ, ನೇರ ಸಾಲ ಯೋಜನೆ, ಸಾರಥಿ ಯೋಜನೆ ಅಡಿಯಲ್ಲಿ ವಾಹನ ಸೌಲಭ್ಯ, ಅರಿವು ಶೈಕ್ಷಣಿಕ ಯೋಜನೆ, ವಿದೇಶಿ ವ್ಯಾಸಂಗಕ್ಕೆ ಸಾಲ ಹೊಲಿಗೆ ಯಂತ್ರ ಹೀಗೆ ಹಲವು ರೀತಿಯ ಸಾಲ ಯೋಜನೆಗಳಿದ್ದು ಕಾಡುಗೊಲ್ಲ ಜನಾಂಗದವರು ಇದರ ಅದುಪಯೋಗಪಡಿಸಿಕೊಳ್ಳಬೇಕು ಎಂದರು.

ತುಮಕೂರು ಜಿಲ್ಲೆಯ ಸಮಾಜದ ಜನರಿಗೆ ಈ ಮಾಹಿತಿ ನೀಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಿದಾಕ್ಷಣ ಬೇಗನೇ ತಾಲ್ಲೂಕು ಮಟ್ಟದ ಅಧಿಕಾರಿಗಳು, ತಹಸಿಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳ ಸಭೆ ಕರೆದು ಅವರಿಗೆ ಮಾಹಿತಿ ನೀಡಲು ಸಹಕರಿಸಿದ್ದಾರೆ. ಜಿಲ್ಲಾಧಿಕಾರಿಗಳ ಸೂಚನೆಯಂತೆ ತ್ವರಿತವಾಗಿ ಜಾತಿ ಪತ್ರ ವಿತರಿಸಲು ಕ್ರಮ ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಎಲ್ಲ ತಾಲ್ಲೂಕುಗಳ ತಹಸೀಲ್ದಾರ್ ರವರು ಜಾತಿ ಪ್ರಮಾಣ ಪತ್ರ ವಿತರಿಸಲು ಗಮನಹರಿಸಬೇಕು. ಪ್ರಮಾಣ ಪತ್ರ ಇಲ್ಲದೆ ಫಲಾನುಭವಿಗಳಾಗಲು ಸಾಧ್ಯವಾಗುತ್ತಿಲ್ಲ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ತಳ ಸಮುದಾಯಗಳ ಜನ ಮೇಲೆ ಬರಬೇಕೆಂದರೆ ಅವರಿಗೆ ಸರ್ಕಾರದ ಯೋಜನೆಗಳು ತ್ವರಿತವಾಗಿ ತಲುಪಬೇಕು ಎಂದರು.

ಅಪರಜಿಲ್ಲಾಧಿಕಾರಿಡಾ.ತಿಪ್ಪೇಸ್ವಾಮಿ,ಉಪವಿಭಾಗಾಧಿಕಾರಿಗಳಾದ ನಾಹಿದಾ ಜಂ ಜಂ ಹಾಗೂ ಎಲ್ಲ ತಾಲ್ಲೂಕುಗಳ ತಹಸಿಲ್ದಾರರು ಉಪಸ್ಥಿತರಿದ್ದರು.

## ಗುಬ್ಬಿಯಿಂದ ಚಿತ್ರದುರ್ಗಕ್ಕೆ ಅಭಿಮಾನಿಗಳ ಮಹಾಸಾಗರ: ಯಡಿಯೂರಪ್ಪ ಸಾಧನೆಗೆ ಗೌರವ ಸಮಾವೇಶ

ಸೂರ್ಯಪ್ರಗತಿನ್ಯೂಸ್.ಕಾಂ



ಗುಬ್ಬಿ: ತಾಲ್ಲೂಕಿನ ನೀರಾವರಿ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಸಾಧನೆಯನ್ನು ಗೌರವಿಸುವ ಅಭಿಮಾನೋತ್ಸವಕ್ಕೆ ಗುಬ್ಬಿ ತಾಲ್ಲೂಕಿನಿಂದ 10 ಸಾವಿರಕ್ಕೂ ಅಧಿಕ ಅಭಿಮಾನಿಗಳು ಇದೇ ತಿಂಗಳ 9ರಂದು ಚಿತ್ರದುರ್ಗಕ್ಕೆ ತೆರಳಲು ಸಜ್ಜಾಗಿದ್ದಾರೆ ಎಂದು ಬಿಜೆಪಿ ಮುಖಂಡ ಎಸ್.ಡಿ. ದಿಲೀಪ್ ಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿಗೆ 7 ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿಸಿ, 38 ಕೆರೆಗಳಿಗೆ ಹೇಮಾವತಿ ನೀರನ್ನು ಹರಿಸಿ, 118 ಹಳ್ಳಿಗಳಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಿದ ಯಡಿಯೂರಪ್ಪ ಅವರು ನಮ್ಮ ಪ್ರದೇಶದ ಅಭಿವೃದ್ಧಿಗೆ ಮಹತ್ವದ ಪಾತ್ರವಹಿಸಿದ್ದಾರೆ ಎಂದು ಹೇಳಿದರು.

ಇಂತಹ ನಾಯಕರ ಸಾಧನೆಯನ್ನು ಗೌರವಿಸುವುದು ಎಲ್ಲರ ಕರ್ತವ್ಯವಾಗಿದ್ದು, ಪಕ್ಷಾತೀತವಾಗಿ ಸಮಾವೇಶ ಯಶಸ್ವಿಗೆ ಸಹಕರಿಸುವಂತೆ ಮನವಿ ಮಾಡಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಬಲರಾಮಯ್ಯ ಮಾತನಾಡಿ, ರಾಜಕೀಯ ಕ್ಷೇತ್ರದಲ್ಲಿ ಯಡಿಯೂರಪ್ಪ ಅವರು ಒಂದು ಶಕ್ತಿಯಾಗಿ ಹೊರಹೊಮ್ಮಿದ್ದು, 50 ವರ್ಷಗಳ ಸಾಧನೆ ಸಾಮಾನ್ಯವಲ್ಲ ಎಂದರು. ರೈತರಿಗೆ ಪ್ರತ್ಯೇಕ ಬಜೆಟ್ ಮಂಡಿಸಿದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಮಕ್ಕಳಿಗೆ ಸೈಕಲ್ ಯೋಜನೆ, ಬಿಸಿಯೂಟ, ವಿಧವಾ ವೇತನ, ವೃದ್ಧಾಪ್ಯ ವೇತನ ಸೇರಿದಂತೆ ಹಲವು ಯೋಜನೆಗಳು ಜನರಿಗೆ ಉಪಕಾರವಾಗಿವೆ ಎಂದು ವಿವರಿಸಿದರು.

ಸಣ್ಣ ಸಮುದಾಯಗಳ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿದ ಯಡಿಯೂರಪ್ಪ ಅವರು ಅಗ್ನಿವಂಶ ಕ್ಷತ್ರಿಯ ಸಮುದಾಯಕ್ಕೆ ನಿಗಮ ಸ್ಥಾಪನೆ ಮಾಡಿದ್ದು, ಅಗ್ನಿಬನ್ನಿರಾಯ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಘೋಷಿಸಿದ್ದಾರೆ. ಹಿಂದುಳಿದ ವರ್ಗಗಳನ್ನು ಮುಖ್ಯವಾಹಿನಿಗೆ ತರುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ ಎಂದು ಹೇಳಿದರು.

ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಭಾಗವಹಿಸುವಂತೆ ಮಾಡಲು ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳಿಂದ ನೂರು ಬಸ್ಸುಗಳ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರೂ ಬೆಳಿಗ್ಗೆ 7 ಗಂಟೆಗೆ ತಮ್ಮ ತಮ್ಮ ಪಂಚಾಯಿತಿ ಕೇಂದ್ರಗಳಲ್ಲಿ ಸೇರಲು ಮನವಿ ಮಾಡಿದರು.

ಬಿಜೆಪಿ ಮುಖಂಡ ಸಾಗರನಹಳ್ಳಿ ವಿಜಯ್ ಕುಮಾರ್ ಮಾತನಾಡಿ, ಎಲ್ಲಾ ವರ್ಗಕ್ಕೂ ಸಾಮಾಜಿಕ ನ್ಯಾಯ ಒದಗಿಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಸಣ್ಣ ಸಮುದಾಯಗಳನ್ನು ಗುರುತಿಸಿ, ಧಾರ್ಮಿಕ ಕೇಂದ್ರಗಳಿಗೆ ಅನುದಾನ ನೀಡುವುದರ ಜೊತೆಗೆ, ಸರ್ಕಾರದ ವಿವಿಧ ಯೋಜನೆಗಳ ಮೂಲಕ ಅವರನ್ನು ಮೇಲಕ್ಕೆತ್ತಿದ್ದಾರೆ ಎಂದು ಹೇಳಿದರು. ಅವರಿಂದ ಲಾಭ ಪಡೆದ ಸಮುದಾಯಗಳೇ ಇಂದು ಈ ಅಭಿಮಾನೋತ್ಸವವನ್ನು ಆಯೋಜಿಸುತ್ತಿರುವುದು ವಿಶೇಷವಾಗಿದೆ ಎಂದರು.

ಜಾತಿ, ಪಕ್ಷ ಭೇದವಿಲ್ಲದೆ ಈ ಕಾರ್ಯಕ್ರಮದಲ್ಲಿ ಲಕ್ಷಾಂತರ ಮಂದಿ ಭಾಗವಹಿಸುವ ನಿರೀಕ್ಷೆಯಿದ್ದು, ಗುಬ್ಬಿ ತಾಲ್ಲೂಕಿನಿಂದಲೂ ಭಾರೀ ಸಂಖ್ಯೆಯಲ್ಲಿ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA.
CONTACT : 9901010109 GMAIL: suryapragathi2021@gmail.com